ಅಪರಂಜಿ

ಫೆಬ್ರವರಿ 2000
ತಿಳಿನಗೆಯ ಕಾರಂಜಿ



ಪ್ರಕಾಶ್
ವಿಜಯರಾಜ ಸುತಾ
ಪಿ.ಎಂ. ವೆಂಕಟೇಶಯ್ಯ
ಅನಾಡಿ
ಬಾಗೂರು
ಆನಂದ
ಕಂ.ಭಂ. ಕೃಷ್ಣಮೂರ್ತಿ
ಗೌತಮ
ನಾಚಿ
ಧೃತಿ
ಶ್ರೀನಿವಾಸ ವೈದ್ಯ
ವೈ. ನಾರಾಯಣಶೆಟ್ಟಿ
ಟಿ. ಸುನೀತ

ಬಿಡಿ ಪ್ರತಿ: ರೂ. 5.00



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್
ನಿರ್ವಹಣೆ:
ಬೇಲೂರು ರಾಮಮೂರ್ತಿ
ಕೃಷ್ಣ ಸುಬ್ಬರಾವ್

ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ: ರೂ. 60
ಹತ್ತು ವರ್ಷದ ಚಂದಾ : ರೂ. 500

ವಿಳಾಸ : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 17 ಫೆಬ್ರವರಿ - 2000 ಸಂಚಿಕೆ - 5

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್, ಬೆಂಗಳೂರು 27

ಎಂ.ಎಸ್.ಕೆ. ಪ್ರಭು

''ಪೀಪಿ'' ಎಂಬ ಕಾವ್ಯನಾಮದಿಂದ ಅಪರಂಜಿ ಓದುಗರಿಗೆ ಪರಿಚಿತರಾಗಿದ್ದ, ಪ್ರಭು ಇನ್ನಿಲ್ಲ. ನಗೆಗಾರರಾಗಿ, ನಾಟಕಕಾರರಾಗಿ, ಯಶಸ್ಸು, ಜನಪ್ರಿಯತೆ, ಇವುಗಳನ್ನು ಗಳಿಸಿದ್ದ ಪ್ರಭು, ಅಪರಂಜಿಯ ಹುಟ್ಟಿನಿಂದಲೇ ಅದರ ಲೇಖಕವರ್ಗಕ್ಕೆ ಸೇರಿದ್ದರು. ಅವರ ಹಾಸ್ಯ ಪ್ರಜ್ಞೆ ನಿಜಕ್ಕೂ ಪ್ರಬುದ್ಧ ಮಟ್ಟದ್ದಾಗಿತ್ತು. ಮೊಟ್ಟಮೊದಲ ಸಂಚಿಕೆಯಿಂದಲೇ ಅವರು ಬರೆದ ''ಪುರುಷರ ಹಕ್ಕುಗಳು'', ''ಆರ್ಥಿಕ ಚಿಂತೆ'' ಮುಂತಾದ ಉತ್ತಮ ನಗೆ ಲೇಖನಗಳು ಅವರ ಮುಂದಿನ ಸಾಹಿತ್ಯ ಸೃಷ್ಟಿಗೆ ದಿಕ್ಸೂಚಿಗಳಂತಿವೆ. ಸಾಹಿತ್ಯದ ವಿದ್ಯಾರ್ಥಿಯಾಗಿದ್ದ ಪ್ರಭುಗೆ ವಿಜ್ಞಾನದಲ್ಲಿ, ಅದರಲ್ಲೂ ಕಾಸ್ಮಾಲಜಿಯಲ್ಲಿ ವಿಶೇಷವಾಗಿ ಆಸಕ್ತಿ. ವಿಜಯನಗರದ ಅವರ ಮನೆಯಲ್ಲಿ ನಾವಿಬ್ಬರೂ ಕೂತು Theory of Everything ಕುರಿತು ಚರ್ಚಿಸಿದ್ದು ಇನ್ನೂ ನೆನಪಿನಲ್ಲಿ ಹಸಿರಾಗಿದೆ. ಅವರ ಇತ್ತೀಚಿನ ನಗೆಲೇಖನಗಳ ಸಂಕಲನ ''ವಿರೋಧ ವಿಲಾಸ'' ಅಪ್ಪಟ ತಿಳಿನಗೆಗೆ ಒಂದು ಜ್ವಲಂತ ಉದಾಹರಣೆ. ಪ್ರಭುರವರ ಲೇಖನಿಯಿಂದ ಇನ್ನೂ ಹೆಚ್ಚು ಕೃತಿಗಳನ್ನು ನಿರೀಕ್ಷಿಸುತ್ತಿದ್ದ ಎಲ್ಲ ಹಾಸ್ಯ ಪ್ರಿಯರಿಗೆ ಅವರ ಅಕಾಲ ನಿರ್ಗಮನ ನಿಜಕ್ಕೂ ಒಂದು ಆಘಾತ.

ಈಗ ಬಹುಶಃ ಆಂಡ್ರೋಮಿಡಾ ಗ್ಯಾಲಾಕ್ಸಿಯಲ್ಲೆಲ್ಲೋ ಅತಿ ಸ್ವತಂತ್ರನಾಗಿ ಹಾರಾಡುತ್ತಾ ಕುತೂಹಲದಿಂದ ಬ್ರಹ್ಮಾಂಡವನ್ನು ವೀಕ್ಷಿಸುತ್ತಿರಬಹುದಾದ ಪ್ರಭುಗೆ ''ಅವರ ಆತ್ಮಕ್ಕೆ ಶಾಂತಿಯಿರಲಿ'' ಎಂದು ಬರೆದರೆ ಆತ ನಕ್ಕರೂ ನಕ್ಕನೇ. ಆ ನಗು ನಮ್ಮನ್ನೆಲ್ಲಾ ಕಾಪಾಡಲಿ.

ಪಿ. ಲಂಕೇಶ್

ಕಳೆದ ಶತಮಾನದ ಕೊನೆಯ ದಿನದಂದು ನಾನು ಲಂಕೇಶರನ್ನು ಭೇಟಿಮಾಡಿದ್ದೆ. ''ಯಾಕ್ರಿ ಬಡವಾಗಿರೋ ಹಾಗೆ ಕಾಣುತ್ತೆ'' ಅಂತ ಕೇಳಿದರು. ''ಡಯಟ್ಟು ವಾಕಿಂಗು ಮಾಡ್ತಿದೀನಿ ಸಾರ್'' ಅಂದೆ. ''ಅಯ್ಯೋ ಅದೆಲ್ಲಾ ಯಾಕ್ರಿ? ದೇಹ ಒಂದು ಷೆಲ್ ಇದ್ದಹಾಗೆ. ಅದು ಇರೋ ಗಾತ್ರಾನ ಏನ ಮಾಡಿದ್ರೂ ಬದಲಿಸೋಕ್ಕೆ ಆಗೋಲ್ಲ. ಒಳ್ಳೇ ಫುಡ್ ಹ್ಯಾಬಿಟ್ ಇಟ್ಕೊಳ್ಳಿ ಸಾಕು'' ಅಂದರು. ನಾನು ಬರೆದಿದ್ದ ಹಲವು ಪುಸ್ತಕಗಳನ್ನು ಕೊಡಲು ಅವರ ಬಳಿ ಹೋಗಿದ್ದೆ. ಅಪರಂಜಿ ಕುರಿತು ಅವರು ನಾಲ್ಕು ಅಭಿಮಾನದ ಮಾತುಗಳನ್ನಾಡಿದರು. ''ಅಮೆರಿಕೆಯ ನ್ಯೂಯಾರ್ಕರ್ ಮಟ್ಟಕ್ಕೆ ತರಬೇಕ್ರೀ ನಿಮ್ಮ ಪತ್ರಿಕೇನ. ಕನ್ನಡಕ್ಕೆ ಇದು ಅಗತ್ಯ'' ಅಂದರು. ಹೇಗೆ ಖ್ಯಾತ ಸಾಹಿತಿಗಳ ಕೃತಿಗಳೂ ಸಹಾ ಕಾಲಕ್ರಮೇಣ ತಮ್ಮ ಸೊಗಡನ್ನು ಕಳೆದುಕೊಂಡು ಒಣಗಿದ ಕಡ್ಡಿಗಳಾಗಿ ನಿಂತುಬಿಡುತ್ತವೆ, ಎಂಬ ವಿಷಯ ಕುರಿತು ಬಹಳ ಹೊತ್ತು ಮಾತನಾಡಿದರು. ಕನ್ನಡ ಸಾಹಿತ್ಯಕ್ಕೆ ಪದಗಳ ಬಳಕೆ, ಅವುಗಳ ಪ್ರಚ್ಛನ್ನ ಶಕ್ತಿ ಇವುಗಳನ್ನು ಪರಿಚಯಿಸಿದ ಲಂಕೇಶ್, ಬೇರೆಯವರ ದೃಷ್ಟಿಯಲ್ಲಿ ಏನೇ ಆಗಿರಲಿ, ನನ್ನ ಮಟ್ಟಿಗೆ ಒಬ್ಬ ಅತಿ ಸಂವೇದನಾಶೀಲ ಲೇಖಕರಾಗಿದ್ದರು. ಅವರ ಆತ್ಮಕ್ಕೆ ಶಾಂತಿಯಿರಲಿ.



○ ಪ್ರಕಾಶ್

ವೈ.ಟೂ.ಕೆ. ಬಗ್ಗೆ ಕಿಡಿ ಹಾರಿಸಲು ವೈ.ಎನ್.ಕೆ. ಇಲ್ಲವಲ್ಲ ಅಂತ ಅಪರಂಜಿ ಕೊರಗಿದಳಂತೆ!!

★★★

ಭಾರತ ಭೇಟಿಗೆ ಕ್ಲಿಂಟನ್ ಆಸಕ್ತಿ

- ಸುದ್ದಿ

ಅದೇ ಉಂಡೇನು ಕದಾ ತೆಗಿ!!

★★★

ಮುಂದಿನ ಚಿತ್ರೋತ್ಸವ ಬೆಂಗಳೂರಿನಲ್ಲಿ

- ಸುದ್ದಿ

ಕನ್ನಡ ಚಳುವಳಿಗಾರರೆಲ್ಲ ಸಿದ್ಧರಾಗುತ್ತಾರೋ?!

★★★

ನಗರದ ಪೌರರ ಮೇಲೆ 'ಅಭಿವೃದ್ಧಿ' ಸುಂಕ

- ಪತ್ರಿಕೆ

ಯಾರ ಅಭಿವೃದ್ಧಿ??

★★★

ಕ್ಲಿಂಟನ್‌ಗೆ ಗಗನಯಾನ ಮಾಡಲು ಬಹಳ ಆಸೆಯಂತೆ

- ಸುದ್ದಿ

ಗ್ರಹಗಳೆಲ್ಲ ನಡುಗಿದವಂತೆ!!

★★★

ಎಲ್ಲಿಂದಲೋ ತಂದ ಮೊಸಳೆಗಳ ಪತ್ತೆ

- ಪತ್ರಿಕೆ

ಅರಣ್ಯ ಇಲಾಖೆಯವರು ಕಣ್ಣೀರು ಹಾಕಿದರಂತೆ!!

★★★

ಸಮಯ ಪಾಲನೆಗೆ ಸ್ಮಾರ್ಟ್ ಕಾರ್ಡ್ ಜಾರಿ

- ಮಾನ್ಯ ಮುಖ್ಯಮಂತ್ರಿಗಳು

ಸ್ಮಾರ್ಟ್ ಅಧಿಕಾರಿಗಳೂ ಇದ್ದರೆ ಬಹು ಚೆನ್ನ!!

★★★

ಜನತಾ ಪರಿವಾರ ವಿಲೀನ ಕನಸು ಭಗ್ನ

- ಸುದ್ದಿ

'ಸ್ವಾರ್ಥತೆ'ಯ ಅಡಿಪಾಯದಿಂದಿರಬಹುದು!

★★★

ವಿಧಾನಸೌಧದ ಎದುರು ನಗೆಗಾರ ಸಂಘದ ಕಾರ್ಯಕ್ರಮ

- ಪತ್ರಿಕೆ

ಸೌಧದದ ಒಳಗಂತೂ ನಗೆಯ ಸದ್ದಿಲ್ಲ ಅಂತ ಇರಬಹುದು!

★★★

ಪಾತಕ್ಕ ಕಲಿಸಿದ ಪಾಠ

– ವಿಜಯರಾಜ ಸುತಾ

''ಹರಿಯನು ನೆನೆಯದ ನರ ಜನ್ಮವೇಕೇ'' ಎಂದು ದೇವರ ನಾಮವನ್ನು ಹಾಡುತ್ತಾ ಹೂಬತ್ತಿ ಹೊಸೆಯುತ್ತಾ ಕುಳಿತಿದ್ದರು ಪಾತಕ್ಕ ಅಂಗಳದಲ್ಲಿ. ಕಿಟ್ಟು, ಪುಟ್ಟೀ ಇಬ್ಬರೂ ಒಬ್ಬರನ್ನೊಬ್ಬರು ಎಳದಾಡುತ್ತಾ, ಬೈಗಳ ಬೈಯುತ್ತಾ ಅಂಗಳಕ್ಕೆ ದುಡದುಡನೆ ಓಡಿ ಬಂದರು. ಅಲ್ಲಿ ಅಜ್ಜಿಯನ್ನು ನೋಡಿದ ತಕ್ಷಣವೇ, ಇಬ್ಬರೂ ಗಕ್ಕನೆ ನಿಂತು, ಏನೂ ಆಗಿಲ್ಲವೆಂಬಂತೆ, ಒಬ್ಬರ ಕೈ ಒಬ್ಬರು ಹಿಡಿದುಕೊಂಡು ತಮ್ಮ ತಪ್ಪನ್ನು ಮುಚ್ಚಿಕೊಳ್ಳಲೋ ಏನೋ ಎಂಬಂತೆ ''ಅಜ್ಜೀ, ಅಜ್ಜೀ, ನಿನಗೊಂದು ವಿಷಯ ಹೇಳಲು ನಾವಿಬ್ಬರೂ ಒಂದೇ ಉಸುರಿಗೆ ಓಡಿ ಬಂದಿದೀವಿ ಅಜ್ಜೀ. ಲೇ ಪುಟ್ಟಿ, ನಾನು ಹೇಳ್ತೀನಿ. ನೀನು ಸುಮ್ಮನಿರೇ'' ಅಂದ ಕಿಟ್ಟು. ಕಿಲಾಡಿ ಪುಟ್ಟಿ ಸುಮ್ಮನಾಗುತ್ತಾಳಾ?

ಲೋ ಕಿಟ್ಟು, ನೀನೇನೋ ಮಹಾ ಹೇಳೋದು? ಈಗ Ladies first ಎಲ್ಲಾದರಲ್ಲೂ. ಅದಕ್ಕೇ ನಾನೇ ಹೇಳಬೇಕು. ನೀನು ಸುಮ್ಮನೆ ಬಾಯ್‌ಮುಚ್ಕೋ, ಗೊತ್ತಾಯ್ತಾ? ಎಂದು ಹೇಳುತ್ತಿರುವಲ್ಲಿ ಪಾತಕ್ಕನು ತನ್ನಷ್ಟಕ್ಕೆ ತಾನೇ...

''ಬುದ್ಧಿಮಾತು ಹೇಳಿದರೆ ಕೇಳಬೇಕಮ್ಮಾ ಮಗಳೇ'' ಎಂದು ಹಾಡಲು ಪ್ರಾರಂಭಿಸಿದಾಗ ಇಬ್ಬರೂ ಒಬ್ಬರ ಮುಖ ಒಬ್ಬರು ನೋಡಿಕೊಳ್ಳುತ್ತಾ, ಅಜ್ಜೀ ಹಾಡುವುದನ್ನೇ ಕೇಳುತ್ತಾ ನಿಂತುಬಿಟ್ಟರು.

''ಮಗಳೇ... ಮನಃ ಶುದ್ಧಳಾಗಿ ಗಂಡನೊಡನೆ ಬಾಳಬೇಕಮ್ಮಾ
ಹೊತ್ತು ಹೊತ್ತಿಗೆ ಮನೆಯ ಕೆಲಸ ಮಾಡಬೇಕಮ್ಮ ಮಗಳೇ
ಹತ್ತು ಮಂದಿ ಒಪ್ಪುವ ಹಾಗೆ ನುಡಿಯಬೇಕಮ್ಮಾ

ಅಟ್ಟು ಉಂಬವ ಕಾಲದಲ್ಲಿ ಆಟಬೇಡಮ್ಮಾ
ಪಟ್ಟಿ ಬಾಗಿಲಲ್ಲಿ ಬಂದು ನಿಲ್ಲಬೇಡಮ್ಮಾ
ನೆರೆ ಹೊರೆಯವರಿಗೆ ನ್ಯಾಯವನ್ನು ಹೇಳಬೇಡಮ್ಮಾ

ಪರರ ನಿಂದಿಪ ಹೆಂಗಳೊಡನೆ ಸೇರಬೇಡಮ್ಮಾ
ಗುರು ಪುರಂದರ ವಿಠಲ ಸ್ಮರಣೆ ಮರೆಯಬೇಡಮ್ಮಾ

''ಲೋ ಕಿಟ್ಟು, ನಾವಿಬ್ಬರೂ clean bold ಕಣೋ. ಅಜ್ಜಿ ಬಲು ಕಿಲಾಡಿ. ಇಲ್ಲಿ ಕೂತ್ಕೊಂಡು ಹತ್ತಿ ಮಾಡ್ತಿದಾರೇ, ಆದರೆ ನಾವು ಪಕ್ಕದ್ಮನೆ ವಿಜಯಕ್ಕನ ಬಗ್ಗೆ ಹೇಳೋಕೆ ಬಂದಿದೀವೀಂತ ಹೇಗೆ ಗೊತ್ತಾಯ್ತೋ ಇವರಿಗೆ?'' ಎಂದು ಕತ್ತು ಸೊಟ್ಟಗೆ ಮಾಡ್ಕೊಂಡು ಉಲಿದಳು ಪುಟ್ಟಿ.

ಅಷ್ಟರಲ್ಲಿ, ಕಿಟ್ಟುವಿನ ಕೊನೇ ತಮ್ಮ ರಂಗ ಓಡೋಡಿ ಬರುತ್ತಿದ್ದ. ಅಜ್ಜಿ ಶುರು ಮಾಡಿಯೇ ಬಿಟ್ಟರು ಇನ್ನೊಂದು ಪದವನ್ನು!

ಬುದ್ಧಿವಂತನಲ್ಲ ರಂಗನು! ಮುದ್ದುಮಾಡಿ ಮಗನ ಸಲಹಿದೆಯಲ್ಲೇ ಗೋಪಿ... ಎಂದಾಗ ರಂಗ ಪೆಚ್ಚುಪಚ್ಚಾಗಿ ಕಣ್ಣು ಬಿಡುತ್ತಾ ನಿಂತರೆ, ಕಿಟ್ಟು, ಪುಟ್ಟಿ ಇಡೀ ಬೀದೀಗೆ ಕೇಳಿಸುವಂತೆ ನಗಲು ಪ್ರಾರಂಭಿಸಿದಾಗ, ಹಾಡುತ್ತಿದ್ದ ಅಜ್ಜಿ, ಹಾಡುನಿಲ್ಲಿಸಿ ತಲೆ ಎತ್ತಿ ನೋಡಿದರು.

ಕಿಟ್ಟು ''ಅಜ್ಜೀ, ನಿನಗೆ ಅಪ್ಪ, ಅಮ್ಮನತರಾ ಮಾತಾಡೋಕೆ ಬರಲ್ವಾ? ಎಲ್ಲಾನೂ ಹಾಡಿನಲ್ಲೇ ಹೇಳ್ತೀಯಲ್ಲಾ? ನೀನು ಎಂ.ಎಸ್. ಸುಬ್ಬಲಕ್ಷ್ಮಿ ಹತ್ತಿರಾ ಹಾಡು ಹೇಳಿಸಿಕೊಂಡ್ಯಾ?'' ಎಂದಾಗ, ಈಗ ನಗುವಿನ ಸರದಿ ಅಜ್ಜಿಯದಾಯಿತು.

ಓಡೋಡಿ ಬಂದು, ಇಲ್ಲಿ ಎಲ್ಲರ ಮುಂದೆ ಅವಮಾನವಾದಂತಾಗಿ, ರಂಗನು ಅಳಲು ಪ್ರಾರಂಭಿಸಿದನು.

ಆಗ ಅಜ್ಜಿ ಅವನ ಕೈಹಿಡಿದು, ತನ್ನ ತೊಡಯಮೇಲೆ ಅವನನ್ನು ಕೂರಿಸಿಕೊಂಡು,

ಅಳುವುದೇತಕೋ ರಂಗ। ದೃಷ್ಟಿ ತಾಗಿತೆ ನಿನಗೆ ರಂಗಯ್ಯ। ಬೆರಳಲಿ ಬೆಟ್ಟವ ನೆಗಹಿದ ಕಾರಣ। ಬೆರಳು ಉಳುಕಿತೇ ನಿನಗೆ ರಂಗಯ್ಯಾ ಎಂದು ಹಾಡಲು ಪ್ರಾರಂಭಿಸಿದಾಗ, ಅಳು ನಿಲ್ಲಿಸಿ ರಂಗನು ಅಜ್ಜಿಗೇ ಕೊಟ್ಟ ತಿರುಗುಬಾಣ.

''ಹರಿಕಥೆ ಹೇಳುವ ಹರಿಜನರು ಈ ಪರಿಯ ಪುರಾಣಕ್ಕೆ ಸರಿದು ಕುಳ್ಳಿರುವರು'' ಎಂದಾಗ, ಕಿಟ್ಟು, ಪುಟ್ಟಿ ದಂಗಾಗಿ ಕಿಲಾಡೀ ತಮ್ಮನನ್ನೇ ನೋಡುತ್ತಾ ನಿಂತುಬಿಟ್ಟರು.

ಲೋ, ರಂಗಾ, ಚೋಟುದ್ದಾ ಇದೀಯಾ, ನಿನಗ್ಯಾರೋ ಹೇಳಿಕೊಟ್ಟರು ಈ ಪುರಾಣಾನಾ'' ಎನ್ನುತ್ತಾ, ಒಳಗಿಂದ ತಾಯಿ ಗೋಪಿಬಾಯಿ ಬಂದು ಮೂರು ಮಕ್ಕಳನ್ನೂ ಮೆಲ್ಲಗೆ ಗದರಿಸಿ, ''ವೃಥಾ ಕಾಲಹರಣ ಮಾಡದೇ ಓದಿಕೊಳ್ರೋ, ಬನ್ರೋ ಒಳಗೇಂತಾ'' ಹೇಳುತ್ತಾ ಒಳಗೆ ಹೋದರು.

ಅಜ್ಜಿ ''ಹುಡುಗ್ರಾ, ನೋಡಿದ್ರಾ, ವಿದ್ಯೆ ಯಾವುದಾದ್ರೂ ಆಗಬಹುದು. ಈಗಿನ ಕಾಲದ ನೀವು ಇಂಗ್ಲೀಷ್ ಭಾಷೆಯಲ್ಲಿ ಎಲ್ಲವನ್ನೂ, ಕಲಿತರೇನೇ ವಿದ್ಯೆ ಅಂತಾ ತಿಳಿದಿದ್ದೀರಾ. ಭಾಷೆ ಯಾವುದಾದ್ರೇನು? ದೊಡ್ಡವರು ಹೇಳಿರುವ ವಿಷಯಗಳನ್ನು ಕೇವಲ ನಾವು ಕೇಳಿ, ತಿಳಿಯುವುದು ಮಾತ್ರವಲ್ಲ, ಅದನ್ನು ನಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸಂಗೀತ ಒಂದು ಮಹಾವಿದ್ಯೆ ಕಣ್ರೋ. ಸುಲಭವಾಗಿ ನಮಗೆ ಮನಸ್ಸಿಗೆ ಆನಂದ ನೆಮ್ಮದಿ ತರೋದು ಮಾತ್ರವಲ್ಲ, ನಮ್ಮನ್ನು ಒಳ್ಳೆಯ ಮಾರ್ಗದಲ್ಲೂ ನಡೆಸಿಕೊಂಡು ಹೋಗುತ್ತೇ, ಈ ದೇವವಿದ್ಯೆ.''

''ನನಗೇನಪ್ಪಾ, ಅಷ್ಟೊ ಇಷ್ಟೊ, ಪದಗಳು ಗೊತ್ತು. ಸಂಗೀತಾಂತ ಸರಿಯಾಗಿ ಪಾಠ ಗೀಟ ನನಗೆ ಯ್ಯಾರಪ್ಪ ಕಲಿಸಿದ್ರು? ಏನೋ, ಹೀಗೆ... ಜ್ಞಾಪಕ ಬಂದಷ್ಟು ಅಲ್ಲೊಂದಿಷ್ಟು, ಇಲ್ಲೊಂದಿಷ್ಟು ಬಾಯ್ನಲ್ಲಿ ಹೇಳ್ತೀನಿ ಅಷ್ಟೇ.''

''ಅಜ್ಜಿ, ಅಜ್ಜಿ, ಈಗ ನಾವೆಲ್ಲಾ ಸೇರಿ ಒಂದು ದಿಢೀರ್ ನಿರ್ಧಾರಕ್ಕೆ ಬಂದಿದೀವಿ. ಇನ್ಮೇಲೇ, ನಮ್ಮಕೋತಿ ಕುಣಿತ, ಹೊಡೆದಾಟ, ಟಿ.ವಿ., ಸಿನಿಮಾ ಎಲ್ಲಾ ಬಂದ್. ಬದಲಾಗಿ.... ಬದಲಾಗಿ.....''

ಏನ್ರೋ ಅದು? ಅದಕ್ಕೆ ಬದಲಾಗಿ ಏನು ಮಾಡ್ಬೇಕೂಂತಾ ಇದೀರೋ? ಏನೋಪ್ಪಾ, ''ಇದು ಎಂಥಾ ಕಾಲವಯ್ಯಾ''.... ನನಗಂತೂ ಈಗ ಬಹಳ ಗಾಬರಿ ಆಗುತ್ತಿದೆ. ಇನ್ನು ನೀವು ಏನಾದರೂ ಹೊಸ ಹಗರಣಕ್ಕೆ ಕೈ ಹಾಕಿ, ತರಳೆಮಾಡಿ, ನಿಮ್ಮಮ್ಮ, ನಾನು ನಿಮ್ಮನ್ನೆಲ್ಲಾ ಮುದ್ದುಮಾಡಿ ಕೆಡಿಸಿಬಿಟ್ಟೇಂತ ನನ್ನ ಬೈತಾಳಲ್ರೋ? ಏನೋ ಅದು ನಿಮ್ಮ ಈ ಬ್ರಹ್ಮಾಸ್ತ್ರ ಯಾವ ಗುಬ್ಬೀಮೇಲ್ರೋ? ಹೇಳಿಪ್ಪಾ ಬೇಗ''... ಎಂದಾಗ

ಎಲ್ಲರೂ ಒಟ್ಟಿಗೆ, ಅಜ್ಜಿ, ಅಜ್ಜಿ ಎಂದು ಹೊಟ್ಟೆ ಹುಣ್ಣಾಗುವಂತೆ ನಗಲು ಪ್ರಾರಂಭಿಸಿದರು.

ತರಗತಿಯ ನಾಯಕಿಯಂತೆ ಪುಟ್ಟಿ ಒಮ್ಮೆಲೇ ಒಂದು ಗದರಿಕೆ ಹಾಕಿ ''ಸದ್ದು'' ಎಲ್ಲರೂ ಒಟ್ಟಿಗೆ ಹೀಗೆ ಕಿರುಚಿದರೆ, ಅದು ಸನ್ಮಾರ್ಗವಾಗುತ್ತೇನ್ರೋ? ನಾವು

ಶುರು ಮಾಡ್ಬೇಕಾಗಿರುವ ಈ ಹೊಸ ಯೋಜನೆಯನ್ನ ನಮ್ಮ ಚೋಟು ಮರಿ ರಂಗನೇ ಹೇಳಲಿ. ಹೇಳೋ ರಂಗಾ.....''

ರಂಗ, ಬಾರೋ, ರಂಗ, ಏನ ಪೇಳುವಿಯೋ ಕಂದ.... ಎಂದು ಸರಾಗವಾಗಿ ಅಜ್ಜಿ ಹೇಳಿ ಮುಗುಳ್ನಕ್ಕರು.

ರಂಗ ತಲೆ ಕೆರ್ಕೋತಾ, ''ಅಜ್ಜೀ... ಈವತ್ತಿನಿಂದಲೇ ನಾವೆಲ್ಲರೂ ಒಟ್ಟಿಗೆ ದಿನಾ ಒಂದೊಂದು ಘಂಟೆ ನಿನ್ನಿಂದ ದೇವರ ನಾಮಗಳನ್ನು ಕಲಿಯೋಣಾಂತ ತೀರ್ಮಾನಿಸಿದೀವಿ. ಅಜ್ಜೀ ಹೇಳ್ಕೊಡ್ತೀಯಾ?

''ಓಹೋ.... ಇದೇನಪ್ಪಾ ನಿಮ್ಮ ಧಿಡೀರ್ ನಿರ್ಧಾರ? ಅದ್ಸರಿ ಈ ದಿನವೇ ಯಾಕೆ?'' ಎಲ್ಲರೂ ಸೇರಿ, ಇಂದಿನ ದಿನವೇ ಶುಭದಿನ, ಇಂದಿನವಾರ ಶುಭವಾರ'' ಎನ್ನುತ್ತಾ ಒಳಗೆ ಹೋದರು.



ದಮಿಳ್ಗನ್ನಡ

– ಪಿ.ಎಂ. ವೆಂಕಟೇಶಯ್ಯ

ಕನ್ನಡ ಭಾಷೆಯಲ್ಲಿ ಎಷ್ಟೋ ವಿಭಾಗಗಳಿವೆ, ಕೆಲವು ಕಾಲಕ್ಕೆ ಸಂಬಂಧಿಸಿದ್ದು ಮತ್ತೆ ಕೆಲವು ದೇಶಕ್ಕೆ ಸಂಬಂಧಿಸಿದ್ದು; ಆಯಾ ಸ್ಥಳಕ್ಕೆ ಸಂಬಂಧವುಳ್ಳದ್ದು.

ಹಳೆಗನ್ನಡ ನಡುಗನ್ನಡ ಹೊಸಗನ್ನಡ ಇವು ಕಾಲಕ್ಕೆ ಸಂಬಂಧ. ಮೇಲಾಗಿ ಸಿರಿಗನ್ನಡವೆಂದು ಹೇಳುವುದುಂಟು ಸಿರಿಗನ್ನಡಂ ಏಳ್ಗೆ, ಗೆಲ್ಗೆ ಎಂಬ ಭಾವುಕ ಭ್ರಮೆಯ ಮಾತುಗಳುಂಟು.

ಇನ್ನು ಹೈದರಾಬಾದ್ ಪ್ರದೇಶದ ಉರ್ದು ಕನ್ನಡ, ಬೆಳಗಾವಿಯ ಮರಾಠಿ ಕನ್ನಡ, ಬಳ್ಳಾರಿಯ ರಾಯರ ತೆಲುಗನ್ನಡವೆಂಬೀ ದೇಶಾವಾರು ಭಾಷೆಗಳು - ಇವೆಲ್ಲಾ ಸರಿ, ನಮ್ಮ ನೆರೆಯ ರಾಜ್ಯವಾದ ತಮಿಳರ ನಾಡಿನಿಂದ ವಲಸೆಯಾಗಿ ಬಂದಿರುವ ನಮ್ಮ ತಂಬಿಗಳು ಆಡುವ ತಮಿಳು ಗನ್ನಡ ಅರ್ಥಾತ್ ದಮಿಳ್ಗನ್ನಡದ ಬಗ್ಗೆ ಸ್ವಲ್ಪ ತಿಳಿಯೋಣ. ಪಾರ್ಕಲಾಂ

ನಮ್ಮ ನೆರೆಯವರೊಬ್ಬರ ಮನೆಗೆ ಪರಿಚಿತ ಅತಿಥಿಗಳೊಬ್ಬರು ಬಂದರು, ನೆರೆಯವರು ''ಬಾರಂಡ'' ಎಂದು ಆಹ್ವಾನಿಸಿದರು. ಏನಿದೀ 'ಬಾರಂಡ' ನನಗೆ ಯೋಚನೆಗಿಟ್ಟುಕೊಂಡಿತು. ಆಂಧ್ರದವರು 'ರಾಂಡೀ' ಎಂದರೆ ಬನ್ನಿರಿ ಎಂದರ್ಥ. ನಮ್ಮ ಕನ್ನಡ ನಾಡಿನಲ್ಲಿರುವ ತೆಲುಗರು ಇದನ್ನು 'ರಾಂಡ' ಮಾಡಿದ್ದಾರೆ. 'ರಾ' ಅಂದರೆ ಕನ್ನಡದಲ್ಲಿ 'ಬಾ' ಎಂದು. ಆದ್ದರಿಂದ 'ರಾಂಡ' ಎಂದರೆ ಕನ್ನಡನಾಡ ತಮಿಳರು 'ಬಾಂಡ' ಮಾಡಿರಬೇಕು, ಅದೇ ನಂತರ ಬಾರಂಡ ಆಗಿರಬೇಕು ಅಂದುಕೊಂಡೆ. ಕನ್ನಡ ತೆಲುಗು, ತಮಿಳು ಭಾಷೆಗಳೆಲ್ಲಾ ದ್ರಾವಿಡ ಮೂಲವೆಂದೂ ಆದ್ದರಿಂದ ಅನೇಕ ಶಬ್ದೋತ್ಪತ್ತಿಗಳು ದ್ರಾವಿಡ ಪ್ರಾಣಾಯಾಮಗಳನ್ನು ಮಾಡುತ್ತಾ, ಕಾವೇರುತ್ತಾ ಕನ್ನಡದ ಕೊಡಗಿನಿಂದ ಹರಿಯುತ್ತದೆ. ಕನ್ನಂಬಾಡಿಯಿಂದ ಮೆಟ್ಟೂರಿಗೆ ದಾರಿಯಲ್ಲಿ ಅಂಕುಡೊಂಕುಗಳಾಗುತ್ತವೆ.

ಒಮ್ಮೆ ನಮ್ಮ ಮನೆ ಎದುರು ಮನೆಯ ಮಹಡಿಯಿಂದ ಓರ್ವ ಮಹಿಳೆಯ ಧ್ವನಿ. ಜಯಲಲಿತ ಸಮಾನ ಕಾಣುವ ಆ ಹೆಂಗಸು ಕೂಗಿದಳು ''ಯಾಂತ್ರು ಅದು

ಗಲಾಟೆ'' ಎಂದು ತನ್ನ ಮೊಮ್ಮಕ್ಕಳ ಕಡೆ ನೋಡಿ ''ಲೇ ಗೋಬಾಲ ನೀ ಅಂಗಡಿಗೆ ಓಯಿಟ್ಟು ಬೇಗಬಾರೋ...'' ನನಗೆ ಈ ಯಾಂತ್ರು ಎಂದರೇನೋ ಗೊತ್ತಾಗಲಿಲ್ಲ. ಹಲವಾರು ಬಾರಿ ಕೇಳಿದ ಮೇಲೆ ಗೊತ್ತಾಯ್ತು ಯಾಂತ್ರು ಅಂದ್ರೆ 'ಏನು' ಅಂತ. ಪಾಪ ಆ ಬಾಲ ಗೋಬಾಲ (ಹಸುವಿನ ಬಾಲ) ಗೋಪಾಲನೆಂದೂ ಕೆಲವು ಸಲ ಕೋಪಾಲನೆಂದೂ ಕರೆಯಲ್ಪಡುತ್ತಿದ್ದ. ಇಲ್ಲಿ ಓಯಿಟ್ಟು ಬಾ ಎಂದರೆ ಹೋಗಿಬಿಟ್ಟು ಬಾ ಎಂದು. ತಮಿಳೂ ಅಲ್ಲದ ಕನ್ನಡವೂ ಅಲ್ಲದ, ಎರಡರ ತದ್ಭವ ಮಿಶ್ರಣ.

ನನ್ನ ಸ್ನೇಹಿತರಾದ ಅಯ್ಯರ್‌ರವರು ಬೆಂಗಳೂರಿಗೆ ಬಂದು ನಾಪತ್ತಾಯಿತಂತೆ ಅಂದ. ಕೆ.ಕೆ. ಮೂರ್ತಿಯವರು ಬಿ.ಡಿ.ಎ. ಅಧ್ಯಕ್ಷರಾಗಿದ್ದಾಗ ಇವರ ಪತ್ನಿ ಮೂರ್ತಿಯವರಲ್ಲಿಗೆ ಹೋಗಿ ಅರ್ಜಿ ಹಾಕಿ ಒಂದು ಸೈಟು ಪಡೆದುಕೊಂಡು ಸ್ವಂತ ಮನೆ ಕಟ್ಟಿ ವಾಸವಾಗಿದ್ದಾರೆ ಇರುವದಿ ವರ್ಷಗಳಿಂದ ಈ ಸೊಂತಮನೆಯಲ್ಲಿ ವಾಸವಾಗಿದ್ದಾರೆ. ಇಂದಿಗೂ ಈ ದಂಪತಿಗಳು ಕನ್ನಡವನ್ನು ಕಲಿಯುವುದಿರಲಿ ಪೇಸುವುದಕ್ಕೂ ಅಸಮರ್ಥರು. ಕೇಳಿದರೆ ನನಗೆ ಅರವದಾಯಿತು ನನ್ನ ಐಕ್ಯೂ ಕಮ್ಮಿ. ಕನ್ನಡ ಕಲಿಯಲಾರೆ ಎನ್ನುತ್ತಾರೆ.

ಒಮ್ಮೆ ದೇವಸ್ಥಾನದಲ್ಲಿ ಇವರ ಹಾಡು ಕೇಳಿದೆ. ಅರಹರ ಮಗಾದೇವಾ, ಹರಗರ ಮಗಾದೇವಾ. ಶಂಭೋಮಗಾದೇವಾ. ಪರಮದಯಾಳ ಬಾಬ ನಾಶಕಾ (ಪಾಪನಾಶಕ ಎಂದು ತಿಳಿಯಬೇಕು) ಐಯರ್‌ರವರ ಮನೆಗೆ ಹೋದಾಗಲೆಲ್ಲಾ ಅವರ ಸಹಧರ್ಮಿಣಿಯವರು ದಮಿಳ್ಗನ್ನಡದಲ್ಲಿ ಬಹಳ ಶಬ್ದಗಳನ್ನು ಬಳಸುತ್ತಾರೆ. ಅವರಿಗೆ ಕನ್ನಡದ ಭೂತವರ್ತಮಾನಗಳು ಗೊತ್ತಿಲ್ಲ ಜೊತೆಗೆ ಏಕವಚನ, ಬಹುವಚನಗಳ ಪರಿಚಯವಿಲ್ಲ. ಒಮ್ಮೆ ಅವರ ಮನೆಗೆ ಹೋದಾಗ ಅವರು ಸಂಭ್ರಮದಿಂದ ಹೇಳಿದರು. ''ನೋಡಿ ಹೆಣ್ಣಿನ ಕಡೆಯವರು ನಮ್ಮ ಮನೆಗೆ ಬಂದಿದೆ. ನಮ್ಮ ಮನೆ ನೋಡಿದೆ''. ನಾನು ತಡೆದು ಬಂದಿದ್ದರು, ನೋಡಿದರು ಎಂದು ತಿದ್ದಿದೆ ಆಗ ಆ ಅದೆ ಬಂದಿದೆರು, ನೋಡಿ - ದೆ-ರು ಅವರಿಗೆ ಒಪ್ಪಿಗೆ ಆಗಿದೆ. ಮದುವೆ ಮುಂದಿನ ತಿಂಗಳು ಆಗಿದೆ (ಆಗುತ್ತೆ) ಇಪ್ಪತ್ತು ವರ್ಷಗಳಾಗಿದ್ದರೂ ಕನ್ನಡಮ್ಮನ ಕಣ್ಣಿನ ಕರುಣೆಗೆ ಇವರು ಪಾತ್ರರಾಗಿಲ್ಲ. ಇಂತಹ ಸಾವಿರಾರು ಜನ ನಮ್ಮ ಸುತ್ತಮುತ್ತಾ ಇದಾರೆ. ಕನ್ನಡಿಗರಿಗೆ ದಮಿಳು ಕಲಿಸುತ್ತಿದ್ದಾರೆ ಕನ್ನಡವನ್ನು ಹರಕಲು ಮಾಡಿ ದ್ರಾವಿಡ ಲೋಪಾಗಮ ಸಂದಿಗಳಲ್ಲಿ ಉಚ್ಚರಿಸಿ, ಸಂಚರಿಸುತ್ತಿದ್ದಾರೆ ಜೈ ಭಾರತ ಜನನಿಯ ತನುಜಾಥೆ ಜಯಗೇ ಕನ್ನಡ ಮಾತೆ. ಈಗ ಕರ್ನಾಟಕದಲ್ಲಿ ಮನೆ ಮಾತಾಗಿರುವ ಬೆಂಗಳೂರು

ದೂ.ದ.ದ 'ಮಾಯಾಮೃಗ' ದಾರಾವಾಹಿಯಲ್ಲಿ ಒಬ್ಬ ಅಚ್ಚ ತಮಿಳಿಗ ಶಾಸ್ತ್ರಿ ಮನೆಗೆ ಬರುತ್ತಾನೆ. ಕನ್ನಡ ಮಿಶ್ರಿತ ತಮಿಳು ಮಾತಾಡುತ್ತಾನೆ ಸ್ವಾರಸ್ಯವಾದ ಸಂಭಾಷಣೆ.

'ಸ್ವಾಮಿ ಶಾಸ್ತ್ರಿಗಳೇ ನಾನು ಒಂದು ದೇವಿ ಚಿತ್ರ ತೆಗೆಯುತ್ತಿದ್ದೇನೆ. ಅದು ಮಗೇಶ್ವರಿ ದುರ್ಗಿ, ರಾಜರಾಜೇಶ್ವರಿ ಅಂಬಾಳ ಚಿತ್ರ, ಅದಕ್ಕೆ ಆಗಲೇ ಎರಡು ಕೋಟಿ ರೂಬಾಯಿ ಪೋಟ್ಟಿರಿಕ್ಕೆ ಎನಕ್ಕು ದೇವರಿ ಪಾತ್ರಕ್ಕು ಒರು ನಲ್ಲಪೊಣ್‌ಬೇಕು. ನಿಮ್ಮ ಮಗಳು ಶ್ರೀಲಕ್ಷ್ಮಿ ಅದಕ್ಕೆ ಸರಿಯಾದ ಆಕ್ಟ್ರೆಸ್ಸು. ನಾರಂಬ ತೇಡುಟ್ಟೆ ನಂಬ ದೇಶಮೆಲ್ಲಾ ಸುತ್ತಾಡಿದೆ. ಎವಕ್ಕೂ ನಲ್ಲ ಸೂಟಬಲ್ ಇರುಕ್ಕ ಪೆಣ್ ಕೆಡಿಕಿಲ್ಲೆ. ನನಗೆ ಬೇಕಾದ ಪಾತ್ರ ತುಂಬಲು ನಿಮ್ಮ ಮಗಳು ಶ್ರೀಲಕ್ಷ್ಮಿ ಸಿಕ್ಕಿದರು. ಶಾಸ್ತ್ರಿ 'ನನ್ನ ಮಗಳು' ಚಿತ್ರದಲ್ಲಿ ಪಾರ್ಟ್ ಮಾಡಲು ನನಗೆ ಇಷ್ಟವಿಲ್ಲ. ಅವಳಿಗೂ ಇಷ್ಟವಿಲ್ಲ ಎನ್ನುತ್ತಾರೆ. ಆಗ ಆ ಪ್ರೊಡ್ಯುಸರ್ 'ಶಾಸ್ತ್ರಿಗಳೇ ನಾನು ಇಪ್ಪುರಂಬ 'ತುಟ್ಟು' ಖರ್ಚು ಮಾಡಿದ್ದೇನೆ ನೀವು ಒಪ್ಪದಿದ್ದರೆ ನನಗೆ ರಂಬ ಲಾಸಾಗಿ ನಾನು ಮುಳುಗುತ್ತೇನೆ. ದೇವರ ಕೆಲಸ ಅಂದುಕೊಂಡು ನೀವು ಇದಕ್ಕೆ ಒಪ್ಪಬೇಕು' ಎಂದು ಸಾಷ್ಟಾಂಗ ಅಡ್ಡಬೀಳುತ್ತಾನೆ.

ಇಂಗ್ಲೀಷಿಗಿದ್ದಂತೆ ಈ ತಮಿಳಿಗೂ ಅಲ್ಪ ಬೆಟ್ಟುಗಳು ಕಡಿಮೆ ಆದ್ದರಿಂದ ಅನೇಕ ಅವಾಂತರಾಭಾಷೆಗಳು ಉಂಟಾಗುತ್ತೆ ಸಿವಾ ಸಿವಾ ಕಾಪಾಡು ಕನ್ನಡವ.

ನಮ್ಮ ಮನೆಗೊಬ್ಬ ತಮಿಳನು ಬೆಣ್ಣೆ ಸಪ್ಲೈ ಮಾಡುತ್ತಾನೆ. ತಮಿಳನೋ ಮಲೆಯಾಳಿಯೋ ಹೇಳುವುದು ಕಷ್ಟ ಅವನು ಮಾತನಾಡುವುದೋ ದಡವಡಾಂತರ ಕರ್ಕಶ. ಬೆಣ್ಣೆ ಪೊಟ್ಟಣ ಕೈಗಿತ್ತು. ''ಇಪ್ಪುರಂಬ ಬೆಲೆ ಜಾಸ್ತಿ ಇರುವದಿ ರೂಬಾ'' ಅನ್ನುತ್ತಾನೆ. ಆದರೂ ಮನೆ ಒಡತಿ ಚೌಕಾಶಿ ಮಾಡಿ ಬೆಲೆ ಸ್ವಲ್ಪ ಕಡಿಮೆ ಮಾಡಿಕೊಳ್ಳುತ್ತಾಳೆ. ನಾನು ಕಣ್ಣಲ್ಲೆ ಅವನನ್ನು ಗದರುತ್ತೇನೆ ಇನ್ನು ಕನ್ನಡ ಬರುವುದಿಲ್ಲವೆ? ಎಂದು ಅವನ ಉತ್ತರ ಮಾಮೂಲು 'ಎನಗೆ ವರಾದು' ಎಂದು ಗೊಣಗುತ್ತಾನೆ. ಒಂದೆರಡು ರೂಬಾ ಕಡಿಮೆ ಕೊಡುತ್ತಾನೆ. ಅಂಗಡಿ ಬಾಡಿಗೆ ಇಲ್ಲವಲ್ಲಾ. ಹೀಗಾಗಿ ವಾಡಿಕೆಯಾಗಿದ್ದಾನೆ. ಸಾಲ ಕೊಡುತ್ತಾನೆ. ಏನು ಮಾಡೋದು ನನ್ನ ಮನೆಯಾಕೆಗೆ ಸಿರಿಗನ್ನಡಾಭಿಮಾನವಿಲ್ಲ. ಒಂದೆರಡೂ ರೂಪಾಯಿ ಕಡಿಮೆ ಆದ್ದರಿಂದ ಒಪ್ಪಂದ ಹತ್ತಾರು ವರ್ಷದಿಂದ.

ನಮ್ಮ ಜನ ಕನ್ನಡಿಗರು ಕನ್ನಡ ಕಲಿಯಲು ಅಲ್ಲ, ಅಲ್ಲ ಕನ್ನಡ ಮಾತನಾಡಲು ಇನ್ನು ಎಷ್ಟು ನವಂಬರುಗಳು ಬೇಕೋ ಇನ್ನೆಷ್ಟು ವಾಟಾಳರು ಬರಬೇಕೋ ತಿಳಿಯದು. ಅಂತೂ ಕನ್ನಡ ಕವಿಗಳ ಪುಣ್ಯದ ಫಲವೋ, ಏಳು ಜ್ಞಾನಪೀಠಗಳು ಸಾಲಾಗಿ ಕೂತಿವೆ ಏಳು ಫಲಕಗಳೂ ಸಾಲಾಗಿ ಗೋಡೆಗೊರಗಿವೆ.

ಕೆಟ್ಟ ಫೋನು

ನಮ್ಮ ಮನೆಯಲ್ಲೊಂದು ಕೆಟ್ಟ
ಫೋನು ಇರುವುದು
ಎತ್ತಿಕೊಳಲು ಹೋದವರಿಗೆ
ಕೋಪ ಬರುವುದು

ಫೋನು ಕೆಟ್ಟು ವಾರವಾಯ್ತು
ದಾತರಿಲ್ಲವು
ದೂರು ಕೊಟ್ಟು ಕಾಲವಾಯ್ತು
ದೂತರಿಲ್ಲವು

ಅವರ ಇವರ ಫೋನುಗಳು
ಸದ್ದು ಮಾಡಲು
ನಮ್ಮ ಮನೆಯ ಫೋನು ಮಾತ್ರ
ನಿದ್ದೆ ಮಾಡಿದೆ

ತಿಂಗಳಾಯಿತೆನ್ನುವಾಗ
ಬಿಲ್ಲು ತಪ್ಪದು
ಬಿಲ್ಲ ಹಣವ ಕಟ್ಟಿರೆಂಬ
ತಗಾದೆ ತಪ್ಪದು

ಹಣವ ಕಟ್ಟಿ ಮನೆಗೆ ಬರಲು
ಫೋನು ಸತ್ತಿದೆ
ಕೋಣೆಗೊಂದು ಶೋಭೆಯಾಗಿ
ಫೋನು ಕೂತಿದೆ

ಊರ ತುಂಬ ಹೊಂಡ ಅಗೆದು
ತಂತಿಹಾಸಿಯು
ಮಂತ್ರಿ ತಂತ್ರಿ ನೂರು ಜನ
ಇದಕೆ ಇದ್ದರು

ಅಲ್ರೋ, ಪಾಪ ನಮ್ಮ ಫೋನು
ಕೆಟ್ಟು ಹೋಯಿತೆ?
ದಾತರಿರುಂ ಕೂಡ ಇದು
ಸತ್ತು ಹೋಯಿತೆ?
(ಜಿ.ಪಿ. ರಾಜರತ್ನಂ ಕ್ಷಮೆ ಕೋರಿ)

– ಅನಾಡಿ



''ಹೌದ್ರೀ, ಆ ಸ್ವಾಮೀಜೀ ಪಾದಕ್ಕೆ ತಲೆ ಮುಟ್ಟಿಸಿದ್ರೆ
ಬಿಳೀ ಕೂದಲು ಕಪ್ಪಾಗುತ್ತಂತೆ ರೀ''

ಅನಿಸಿಕೆಗಳು

– ಬಾರೂರು

ಮೊದಲು ಅಪರಂಜಿಯ ಓದುಗ ಮಹಾಶಯರಿಗೆ ಹೊಸ ವರ್ಷದ ಶುಭಾಶಯಗಳನ್ನು ಹೇಳುವುದರ ಜೊತೆ ಜೊತೆಗೆ ಹೊಸತೇನಾದರು ಹೇಳಬೇಕೆಂಬ ಹಂಬಲವಾಗುತ್ತಿದೆ, ಹಠವಿದೆಯೆನ್ನಿ, ಒಟ್ಟಿನಲ್ಲಿ ಏನಾದರೂ ಅಂದುಕೊಳ್ಳಿ - ಆದರೆ ನನ್ನ ಕಂಡಿಷನ್‌ಗೆ ಒಪ್ಪಿದರೆ ಮಾತ್ರ

1. ಮದುವೆಯಾದವರು ಮಾತ್ರ ಓದಬೇಕು
2. ಸಾಂಪ್ರದಾಯದ ಮನದವರು ಓದಲೇಬಾರದು
3. ಓದಿದ ಮೇಲೆ ಹಾಸ್ಯವೆಂದು ಪರಿಗಣಿಸಬೇಕು
4. ಇಲ್ಲಿಯ ವಿಷಯವನ್ನು ಯಾರಮೇಲೂ ಪ್ರಯೋಗಿಸಬಾರದು
5. ಪ್ರೀತಿಯನ್ನೇ ಮಾಡಿದವರು ಕಣ್ಣೆತ್ತಿಯೂ ಈ ಲೇಖನ ನೋಡಬಾರದು
6. ನೋಡಿದರೂನೂ ವಿಷಯ ತಲೆಯಲ್ಲಿದ್ದು ಗುಂಯ್‌ಗುಡಬಾರದು

ಮೇಲಿನ ಆರೂ ಕಂಡೀಷನ್‌ಗೆ ಒಪ್ಪಿದ್ದೀರಿ ತಾನೆ, ಹಾಗಾದರೆ ಆಕಾಶವಾಣಿ, ದೂರದರ್ಶನ, ಧ್ವನಿವರ್ಧಕ ಬಿರುದಾಂಕಿತೆಯರಾದ ಪ್ರಭ ಹಾಗೂ ಅಂಬುಜಾರವರಿಂದಾನೆ ತಿಳಿದುಕೊಳ್ಳುವ. ಕೇಳುತ್ತಿದೆಯೆ ಅವರು ಹೇಳುತ್ತಿರುವುದು ಆಲಿಸಿ.

ರೀ... ಅಂಬುಜಮ್ನೋರೆ... ರೀ... ಒಳಗೇನು ಏನ್‌ಮಾಡ್ತಿದ್ದೀರಿ ಬೆಳಗ್ಗೆಯಿಂದ ಒಂದೂ ಮಾತೂ ಆಡ್ಲಿಕೆ ಆಗ್ಲಿಲ್ಲವಲ್ಲರೀ... ಎಂಥದ್‌ರಿ... ಬರ್‍ರೀ ಹೊರಗೆ.

ಪ್ರಭ... ಬಂದೇರಿ...

ನಿಮ್ಗೇನಪ್ಪ ನಿಮ್ಮ ಮಗಳು ಎಲ್ಲಾ ಕೆಲಸ ಮಾಡಿಬಿಡ್ತಾಳೆ ಹಾಯಾಗಿದ್ದೀರ, ತಿಂಡಿ ಆಯ್ತೇನ್ರಿ... ಏನ್‌ಮಾಡಿದ್ರಿ...

ದೋಸೆ ಮಾಡಿದ್ಲುರೀ... ಬಿಸಿ ಬಿಸಿಯಾಗಿ 12 ತಿಂದೆ ನೋಡ್ರಿ.

12ನ್ನೇ ಏಕೆ ತಿಂದ್ರಿ...?

ಚಟ್ನಿ ಮುಗಿದು ಹೋಗಿತ್ತೂರೀ... ಎಲ್ಲಾ ಅವರಪ್ಪನ ಹಾಗೆ ರುಚಿ ರುಚಿಯಾಗಿ ಅಡಿಗೆ ಮಾಡ್ತಾಳ್ರಿ. ನನಗೆ ತುಂಬಾ ಗೌರವ ಕೊಡ್ತಾಳೆ ಅವರಪ್ಪನಂಗೇನೆ, ಅಲ್ಲಾರೀ ಅಂಬು... ನಮ್ಮ ಮಗಳ ಜೊತೇಲಿ ಓದ್‌ತಿದ್ಲಲ್ಲ

ರಾಧಾ... ಅದೇರೀ... ಆಚೇಮನೆ ಮಂಗಳಮ್ಮನ ಮಗಳು ರಾಧಾ. ಅದ್ಯಾವುದೋ ಹುಡುಗನ ಹಿಂದೇನೆ ಸುತ್ತುತಿದ್ಲುರೀ...

ಹೌದಾ... ಏನಾಯ್ತು ಅಂತೀನಿ.

ಅಗೋದೇನ್ರಿ ಎಲ್ಲಾ ಮುಗಿದಂಗೆ ಆಗಿದೇರಿ... ಆ ಹುಡುಗೀನ ಮಾವನಿಗೇ ಮದುವೆ ಮಾಡಿಕೊಡ್ತಿದ್ದಾರೆ, ಅವರಮ್ಮ ಮೊನ್ನೆ ಸಿಕ್ಕಾಗ ಹೇಳ್ತಿದ್ರುರೀ...

ಹೌದಾ... ಅದ್ಯಾವುದೋ ಹುಡ್ಗನ ಜೊತೆ ಸುತ್‌ತಿದ್ಲು ಅಂದ್ರಿ... ಮತ್ತೆಂಗ್ ಹೇಳ್ರಿಕಥೆ ಹೋಟೆಲು, ಸಿನಿಮಾ, ಪಾರ್ಕು, ಐಸ್‌ಕ್ರೀಮ್ ಪಾರ್ಲರ್... ಗಲ್ಲಿ ಗಲ್ಲಿಯಲ್ಲಿಯೂ ಅಲಿತಿದ್ರು ಒಬ್ಬರನ್ನೊಬ್ಬರು ಬಿಟ್ಟಿರತಿರಲಿಲ್ಲ... ಐದಾರು ವರ್ಷದಿಂದ ಇದ್ರಲ್ರಿ ಜೊತೆ ಜೊತೆಗೆ, ಈಗ ನೋಡಿದ್ರೆ ಹೀಗೆ ಕೈಕೊಡಬಹುದಾ? ಹುಡ್ಗ ಸುಮ್ನೆ ಇದಾನೇನ್ರಿ? ಪಾಪ.

ಪ್ರಭ ಹೇಳಿದ್ಲು ಅಂತ ಯಾರಿಗೂ ಹೇಳೋಲ್ಲ ಅಂದ್ರೆ ಮಾತ್ರ ಹೇಳ್ತೀನಿ, ಯಾಕೆಂದ್ರೆ ರಾಧಾನ ಇನ್ನೊಬ್ಬ ಗೆಳತಿ ಹೇಳಿದ್ಲು ಯಾರತ್ರಾನು ಹೇಳಬೇಡಿ ಅಂದಿದ್ದಾರೆ ಅವಳಿಗೆ ಮಾತು ಕೊಟ್ಟಿರುವುದರಿಂದ ಹೇಳ್ತಾ ಇದೀನಿ ಅಷ್ಟೆ.

ಅಲ್ಲ ಅಂಬುಜಮ್ಮ ನಾ ಯಾವತ್ತಾದ್ರು ಹೇಳಿದೆನೇನ್‌ರ್ರೀ ಬೇರೆ ಯಾರೋ ಕೇಳಿಸಿಕೊಂಡು ಹಾಗಂದಿದ್ದಾರೆ ಅಷ್ಟೆ. ನನ್ನ ಮೇಲೆ ತಾನೆ ಗೂಬೆ ಕುಳ್ಳರಿಸೋದು... ಕೆಲವೊಬ್ರು.

ನಮಗ್ಯಾಕರಿ ಬೇರೆಯವರ ಸುದ್ದಿ ಏನೋ ಮಾತಿಗೆ ಮಾತಾಡ್ತೀವಿ ಅದ್ಕೆ ತಲೆ ಮೇಲೆ ಕಲ್ಲು ಬಿದ್ದವರ ಹಾಗೆ ಆಡ್ತಾರೆ... ಹೇಳ್ರಿ... ಅದೇನು ಇಲ್ಲೇ ಕೇಳಿ ಇಲ್ಲೆ ಮರ್‍ತುಬಿಡ್ತೀನಿ.

ಹಾಗಾದ್ರೆ ಹತ್ರಕ್ಕೆ ಬನ್ರೀ... ಯಾರಾರಾ ಕೇಳಿಸ್ಕೊಂಡ್ರೆ ಕಷ್ಟಕಣ್ರಿ. ನೋಡ್ರಿ ಆ ಹುಡುಗಿ ರಾಧಾ ಇದಾಳಲ್ಲ ಅವ್ಳು ಬಾರೀ ಜಾಣೆ ರೀ...

ಏನ್ರಿ ಅದು ಒಗಟು ಹೇಳಿಬಿಟ್ರಿ ನೀವು ಸುಮ್ನೆ ಸುತ್ತಿಬಳಸಿ ಮಾತಾನಾಡಬೇಡಿ ಸುಮ್ನೆ ಟೆನ್‌ಷನ್ ಆಗುತ್ತೇರಿ ಹೇಳ್‌ರೀ ಬೇಗ.

ಅದ್ಯಾಕರೀ ಅಷ್ಟೊಂದು ಅರ್ಜೆಂಟ್ ಮಾಡ್ತಿದಿರ ಕೂತ್‌ಕೊಳ್ರಿ... ಇಲ್ಲಿ ನೀವೇ ಚಡಪಡಸ್ತೀರಲ್ರಿ. ಅಷ್ಟೆಲ್ಲ ಅಡ್ಡಾಡಿದಾರೆ. ದಾದಾ ಅವಳ ಬಾಯ್‌ಫ್ರೆಂಡ್ (ಲವರ್) ಮದುವೇನು ಮಾಡ್ಕೊಳ್ತೀನಿ ಅಂತಿದ್ಲಂತೆ - ಏನೇನಾತೋ ದೇವರೇ ಬಲ್ಲ ಒಂದ್ ದಿನ ರಾಧಾ ಆ ಹುಡುಗನ ಹೆದರಿಸಿಬಿಟ್ಟಿದ್ದಾಳೆ ಕಣ್ರಿ ಯಾಕೆಂದ್ರೆ ಅವನೆದುರಲ್ಲಿ ಅತ್ತೂ ಕರೆದು ನಾಟಕ ಮಾಡಿದ್ಲಂತೆ.

ಯಾಕಂತ್ರೀ... ಅಲ್ಲಾರೀ ಅಷ್ಟೊಂದು ಪ್ರೀತಿಸುವವನಿಗೂ ಹಾಗೇ ಮಾಡಬಹುದೇನ್ರಿ? ಅಲ್ಲಾ ಆ ಮುತ್ತಾಳ ಹೆಂಗಾದ್ರು ಒಪ್ಪಿಕೊಂಡರೀ... ಪಾಪ್‌ಮುಂಡೇದು, ಏನೆಲ್ಲ ಆಸೆ ಇಟ್ಕೊಂಡಿತ್ತೋ... ಪಾಪ.

ಪಾಪ ಏನ್ ಬಂತ್ರಿ ಜಾತಕ ಕೂಡ್ಲಿಲ್ಲ ಅಂದ್ಲಂತೆ... ಮೊದ್ಲು ಒಮ್ಮೆ ಬೇರೆ ಜಾತಿಯಾದ್ದರಿಂದ.. ಅಂದಿದ್ಲಂತೆ. ನೋಡಿ ಅವನಿಗೆ ಚೆನ್ನಾಗಿ ತಲೆ ತೊಳೆದು ಬಿಟ್ಟಿದ್ದಾಳೆ ಹುಣಸೆ ಹಣ್ಣಾಕಿ, (ರಾಧಾ) ನನ್ನ ಮದ್ವೆಯಾದ ಗಂಡು ಆರೇ ತಿಂಗಳಲ್ಲಿ ಗೊಟಕ್ ಅಂತ ಅಂತಾರೆ ಅಂದ್ಲಂತೆ ಪಾಪ ಹುಡ್ಗುಮುಂಡೇದು ತಲೇ ಮೇಲೆ ಬಾಯಿ ಮೇಲೆ ಒಂದೊಂದು ಕೈಯಿಟ್ಕೊಂಡು ಗೊಳೋ ಅಂತ ಅತ್ಕೋತ ಕೂತಿತಂತೆ ಪರದೇಶಿಯಂಗೆ ಎಂತ ಕಾಲ ಬಂತೂರೀ... ಅಲ್ಲಾ ಜಾತಕಾನ ಹೀಂಗೂ ಹೇಳಬಹುದಾ ಅಂತ?!

ಅಲ್ಲ ಪ್ರೇಮಿಸಿದವನನ್ನು ಮದ್ವೆ ಮಾಡ್ಕಂಡ್ರೆ ಆರೇ ತಿಂಗಳಿಗೆ ಗೋತಾ ಆಗೋವಾಗ... ತಂದೆ ತಾಯಿ ನೋಡಿದ್ ಮದುವೆ ಮಾಡ್ಕಂಡ್ರೆ ಸಾಯೋಲ್ಲವೆ???!!

ಏನೇ ಆಗ್ಲೀರಿ ಹುಡ್ಗಿ ತುಂಬಾ ತುಂಬಾ ಜಾಣೇರಿ... ಮುಗ್ದ ಆ ಭಾವುಕನ ಕಟ್ಟಿಕೊಂಡ್ರೆ ಎರಡೂ ಕೈಲಿ ಸುರ್‌ಕೊಂಡಂಗೇ ಅಂತ ತಿಳ್ಕಂಡು ಒಳ್ಳೇ ಹುಡುಗನ್ನೆ ಮದುವೆಗೆ ಒಪ್ಪಿಕೊಂಡಿದ್ದಾಳೆ ಅನ್ಸುತ್ತೆ ಪ್ರೀತಿ ಮಾಡಿದ ಪೆಕರನ ಎದುರು ಕಣ್ಣೀರ ಹನಿ ಖರ್ಚು ಮಾಡಿದ್ಲಂತೆ, ಅಷ್ಟೆ - ನೋಡ್ರಿ. ಹೆಣ್ ಮಕ್ಳ ಕಣ್ಣೀರಿಗೆ ಎಷ್ಟೊಂದು ಬೆಲೆ ಅಂತೀನಿ, ಏನೇ ಆಗ್ಲಿ ಆ ಪಾಪದ ಹುಡುಗ ನೆನಸ್ಕೊಂಡ್ರೆ ಸಂಕಟ ಅನ್ಸುತ್ತೇರಿ...

ಮೊನ್ನೆ ಅದೇ ವಿಜಯನಗರದ ಚೌಲ್ಟ್ರೀಲಿ ರಾಧಾನ ಮದ್ವೆಗೆ ಹೋಗಿದ್ವು ಆ... ಹಾ.. ಏನ್ ಗ್ರ್ಯಾಂಡ್ ಅಂತೀರಿ ಎರಡು ಕಣ್ಣೂ ಸಾಲ್ದೂರಿ ರಾಧಾ ಖುಷಿ ಖುಷಿಯಾಗಿದ್ಲು ಹುಡಗನನ್ನು ತನ್ನಲ್ಲ ಫ್ರೆಂಡ್ಸ್ ಸರ್ಕಲ್‌ಗೆ ಪರಿಚಯಿಸುತ್ತಾ. ಅವರ ಅಪ್ಪ ಅಮ್ಮರಂತು ಸ್ವರ್ಗದಲ್ಲಿ ಇದಾಂಗೆ ಇದ್ರೂರೀ...

ಊಟ ಮುಗಿಸ್ಕೊಂಡು ಮನೆ ಕಡೆಗೆ ಕಾರ್ನಲ್ಲಿ ಬರ್ತಿರೋವಾಗ ಒಂದು ಆಕ್ಸಿಡೆಂಟ್ ಆಗ್‌ಬೇಕಾಗಿತ್ತುರೀ... ಛೆ... ಯಾವನೋ ಪ್ರಾಯದವನೆ ಕಾರಿಗೆ ಎದುರು ಬಂದ್‌ಬಿಡೋದೆ. ಏನೋ ನಮ್ಮ ಮನೆಯವರು ಸರಿಯಾಗಿ ಬ್ರೇಕ್ ಹಾಕಿದ್ರು ಅನ್ನಿ ಆದ್ರೂ ಬಿದ್ದಿದ್ದ... ಹರಕು ಮುರುಕ ಗಡ್ಡ ಹರಿದ ಬಟ್ಟೆ ಪೇಪರ್‌ಗಳ (ಕವನಗಳ ಗೊಂಚಲಿರಬಹುದು) ಕಟ್ಟು ಹಿಡಕೊಂಡು ಬಡಬಡಿಸ್ತಾ ಇದ್ದಾ... ಕೆಳಗಿಳಿದು ನೋಡಿದ್ರೆ ಅದೇರೀ... ರಾಧಾನ ಮಾಜಿ ಲವ್ವರ್...

ಅಯ್ಯೋ ಯಾಕ್ ಬೇಕು ಬಿಡ್ರಿ ಬೇರೆಯವರ ಸಮಾಚಾರ ಅದೇನೊ ಹೇಳ್ತಾರಲ್ಲ ಮಾಡ್ದೋರ ಪಾಪ ಆಡ್ದೋರ ಬಾಯಾಗೆ ಅಂತ.... ಅಯ್ಯೋ ಅದೇನೋ ಸೀದ ವಾಸನೆ ಬರ್ತಾ ಇದೇರಿ ಬರ್ತೀನಪ್ಪ.

★★★

ನಂಬರ್‌ನಲ್ಲೇನಿದೆ? ಎಲ್ಲವೂ...

- ಆನಂದ

ಇಂದಿನ y2k ಯುಗದಲ್ಲಿ ಷೇಕ್ಸ್‌ಪಿಯರ್ ಇದ್ದಿದ್ದರೆ ಅವನು 'ಹೆಸರಿನಲ್ಲೇನಿದೆ'? ಎಂದು ಯಾವುದೇ ಪಾತ್ರದ ಬಾಯಿನಲ್ಲಿ ಹೇಳಿಸುತ್ತಿರಲಿಲ್ಲ. ಆ ಪಾತ್ರ 'ನಂಬರ್‌ನಲ್ಲೇನಿದೆ?' ಎಂದು ಕೇಳುತ್ತಿತ್ತು. ಏಕೆಂದರೆ ತಿಪ್ಪೆಯನ್ನು ಹೇಗೆ ಕರೆದರೂ ನಾತ ಅದೇ' ಎಂದು ನಂಬರ್‌ಗಳ ಬಗ್ಗೆ ಹೇಳುವಂತಿಲ್ಲ. ಈ ನಂಬರ್ ಯುಗದಲ್ಲಿ ನಾವು ನಮ್ಮ ನಂಬರ್‌ಗಳ ಬಗ್ಗೆ ಕರಾರುವಕ್ಕಾಗಿ ಇರಬೇಕು. ಒಂದು ಸಂಖ್ಯೆ ಸಹ ಹೆಚ್ಚು ಕಡಿಮೆ ಆಗುವಂತಿಲ್ಲ.

ಉದಾಹರಣೆಗೆ ಮನೆಯನ್ನೇ ತೆಗೆದುಕೊಳ್ಳಿ, ಮನೆ ನಂಬರ್ 49 ಎಂದರೆ ಸ್ನೇಹಿತರು, ಸಾಲಗಾರರು ಹುಡುಕಿಕೊಂಡು ಬಂದಾರು. ಆದರೆ ಕಂದಾಯ ಕಛೇರಿಯಲ್ಲಿ ಸರ್ವೆ ನಂಬರ್ ಎಷ್ಟು? ಎಂದು ಕೇಳುತ್ತಾನೆ ಕಂದಾಯ ಅಧಿಕಾರಿ, 64/4 ಎಂದಾಗ ಅವನಿಗೆ ಕಡತ ಸಿಗುತ್ತದೆ. ನಂತರ 49ಕ್ಕೆ ಬರುತ್ತಾನೆ. ಜನ್ಮದಿನಾಂಕ ಅಂದರೆ ಬರ್ಥ್‌ಡೇಗಳನ್ನು ಮರೆಯಲು ಸಾಧ್ಯವೆ. 13/7, 26/11, 29/11 ಹೀಗೆ ಹೆಂಡತಿ, ಮಗ, ಮಗಳು ಹುಟ್ಟಿದ ದಿನ ನೆನಪಿನಲ್ಲಿರಬೇಕು. ನನ್ನದು 25/4 ನನಗೇ ನೆನಪಾಗದಿದ್ದರೂ ಚಿಂತೆ ಇಲ್ಲ.

ಹಾಗೆಯೇ ಫೋನ್ ನಂಬರ್ ಸಹ 3413558 ಎಂದರೆ ನನಗೆ ಸಾಲದು ಏಕೆಂದರೆ ಲಾಕ್ ಮಾಡಿರುವದರಿಂದ ಅದರ ಕೋಡ್ 1946 ನೆನಪಿನಲ್ಲಿರಬೇಕು. ನನ್ನ ಫೋನ್ ನಂಬರ್ ನೆನಪಿನಲ್ಲಿಟ್ಟುಕೊಂಡರೆ ಸಾಕೆ? ಅಣ್ಣಾ, ತಂಗಿ, ತಮ್ಮ ಹೀಗೆ ಹಲವಾರು ನಂಬರ್‌ಗಳು ಬಾಯಿಪಾಠ ಆಗಿರಬೇಕು. ಇವು ನನ್ನ ಕಡೆಯದಾಯಿತು. ನನ್ನ ಹೆಂಡತಿಯ ಕಡೆಯದೂ ಅಷ್ಟೇ ಇವೆ - ಅತ್ತೆ, ಮೈದುನ, ಭಾವ ಹೀಗೆ ಹಲವಾರು ಮಂದಿಯ ಫೋನ್ ನಂಬರ್‌ಗಳು ನೆನಪಿನ ಭಂಡಾರಕ್ಕೆ ಸೇರಿಸಿರಬೇಕು. ಜೊತೆಗೆ ಸ್ನೇಹಿತರದು, ಬೆಂಗಳೂರಿನಾಚೆಯದಾದರೆ ಆ ನಂಬರ್ ಜತೆ ಸಂಬಂಧಿಸಿದ ಎಸ್‌ಟಿಡಿ ಕೋಡ್ ನೆನಪಿಸಿಕೊಳ್ಳಬೇಕು ಅಣ್ಣ ದೆಹಲಿಯಿಂದ ವಾಪಸಾದ ಮೇಲೆ ಎಸ್‌ಟಿಡಿ ಕೋಡ್ 911 ಮರೆತಿದ್ದೇನೆ.

ಆದರೆ ಮಗಳು ವಿದೇಶಕ್ಕೆ ಹೋದಮೇಲೆ ಅವಳ ನಂಬರ್ 64 94 7035 ನನ್ನ ಡೈರಿ ಸೇರಿದೆ. ಅದೇ ದೊಡ್ಡದು ಎಂದು ಗೊಣಗುವಂತಿಲ್ಲ. ಏಕೆಂದರೆ, ಅದಕ್ಕೆ ಐಎಸ್‌ಡಿ ಕೋಡ್ ಸೇರಿಸಿ ಡಯಲ್ ಮಾಡಿದರೆ ಅವಳು ಸಿಗುತ್ತಾಳೆ.

ಹಾಗೆ, ಆಫೀಸಿನ ನಂಬರ್ ಕೊಡುವಾಗ 55 88 999 ಎಂದರೆ ಸಾಲದು ಏಕೆಂದರೆ ನನ್ನ ಹೆಸರಿನವರು 3-4 ಮಂದಿ ಇದ್ದಾರೆ ಆದುದರಿಂದ ಎಕ್ಸ್‌ಟೆನ್‌ಷನ್ 567 ಕೇಳಿ' ಆಗ ಟೆನ್ಷನ್ ಕಡಿಮೆ ಎನ್ನಬೇಕು. ಆದರೆ ಅದು ಯಾವಾಗಲೂ ಎಂಗೇಜ್ ಎಂದರೆ 'ಹೌದೆ'? ಹಾಗಿದ್ದರೆ 55 88 305 ಟ್ರೈ ಮಾಡಿ ಎಂದು ಸಲಹೆ ಮಾಡಬೇಕು. ಆಫೀಸಿನಲ್ಲೂ ಅಷ್ಟೆ ಹಲವಾರು ಇಲಾಖೆಗಳ ನಂಬರ್ ನೆನಪಿನಲ್ಲಿರಬೇಕು ಇಲ್ಲದಿದ್ದರೆ ಕೆಲಸವಾಗದು.

ಅಂದಹಾಗೆ, ಆಫೀಸಿನಲ್ಲಿ ಏನಾದರು ವಿಚಾರಿಸಲು ಫೈನಾನ್ಸ್ ಅಥವಾ ಪರ್ಸೊನಲ್‌ಗೆ ಹೋದರೆ ಅವರಿಗೆ ನನ್ನ ಹೆಸರು ಹೇಳಿದರೆ ಸಾಲದು ಎಂಪ್ಲಾಯಿ ನಂಬರ್ ಎಷ್ಟು ಎನ್ನುತ್ತಾರೆ. 016536 ಎಂದರೆ ಮಾತ್ರ ನನ್ನ ಅಸ್ತಿತ್ವ ಸಾಬೀತಾಗುತ್ತದೆ. ಒಂದು ರಿಯಾಯಿತಿ ಎಂದರೆ ಇದರಲ್ಲಿ ನನ್ನ ಪಿ.ಎಫ್. ನಂಬರ್ ಸಹ ಸೇರಿದೆಯಂತೆ 01653. ಇದು 2 'ಇನ್ 1 ನಂಬರ್ ಅಂತೆ ಆದರೆ ವಿ.ಪಿ.ಎಫ್. ನಂಬರ್ ಬೇರೆ ಇದೆ ಅದು 152 ಬ್ಯಾಂಕ್‌ಗೆ ಹೋದಾಗ ಅವರು ಬೇಜಾರು ಮಾಡಿಕೊಂಡೇ 'ಲೆಡ್ಜರ್ ನಂಬರ್ ಎಷ್ಟು' ಎಂದು ನನ್ನನ್ನೇ ಕೇಳುತ್ತಾರೆ. ಅದು ನನಗೆ ಗೊತ್ತೇ ಇರುವುದಿಲ್ಲ.

ಕಪ್ಪು ಹಣ ಇಲ್ಲದಿದ್ದರೂ ಎರಡು ಬ್ಯಾಂಕ್ ಖಾತೆಗಳಿವೆ. 121284 ಮತ್ತು 504 ನೆನಪಿಸಿಕೊಂಡೇ ವ್ಯವಹಾರ ಮಾಡಬೇಕು. ಒಂದು ಬ್ಯಾಂಕ್‌ನವರು ಮಾಸ್ಟರ್ ಕಾರ್ಡ್ ಕೊಟ್ಟು ನನ್ನನ್ನು ನಂಬಿದ್ದಾರೆ. ಅದರ ನಂಬರ ಸುತರಾಂ ನೆನಪಿಗೆ ಬಾರದು. ಅಷ್ಟು ದೊಡ್ಡದು - ವಿಮಾ ಪಾಲಿಸಿ ನಂಬರ್‌ನಂತೆ. ಅಂದ ಹಾಗೆ ವಿಮಾ ಪಾಲಿಸಿ ಸಹ ನನ್ನದಿದೆ. ಆದರೆ ಕಂತು ಸಂಬಳದಲ್ಲೇ ಹಿಡಿಯುವದರಿಂದ ಅದರ ನಂಬರ್ ನೆನಪಿಸಿಕೊಳ್ಳಬೇಕಿಲ್ಲ. ಸದ್ಯ ಎಟಿಎಂ ಕಾರ್ಡ್ ಸಿಕ್ಕಿಲ್ಲ ಅದರಲ್ಲಿ 11 ಸಂಖ್ಯೆಗಳಿವೆ. ಎನ್.ಎಸ್.ಎಸ್. ನಂಬರ್ 23871

ಮನೆಗೆ ಎರಡು ಮ್ಯಾಗಜಿನ್‌ಗಳು ಬರುತ್ತವೆ. ತಡವಾದರೆ, ಬಾರದಿದ್ದರೆ ಅವುಗಳ ಚಂದಾ ನಂಬರ್ ಬೇಕು. ಒಂದು ಸಾಪ್ತಾಹಿಕ ಅದರ ನಂಬರ್ 50 ಐಟಿಇ 28339. ಇನ್ನೊಂದು ಮಾಸಿಕ - 320784700 ಇವುಗಳೊಂದಿಗೆ ಏನೇ ವ್ಯವಹಾರ ಮಾಡಿದರೂ ಚಂದಾ ನಂಬರ್ ನಮೂದಿಸಲು ಮರೆಯಬೇಡಿ ಎಂದು ಎಚ್ಚರಿಕೆ ನೀಡಾಗಿದೆ. ಗ್ಯಾಸ್‌ಗೆ ಬುಕ್ ಮಾಡಲು ಹೋದಾಗ ಕನ್‌ಸೂಮರ್ ನಂಬರ್ ಕೇಳುತ್ತಾರೆ - 4087 ಎಂದು ಹೇಳಿದರೆ ಸಿಲಿಂಡರ್, 10 ದಿನಗಳ ನಂತರ ಇಲ್ಲದಿದ್ದರೆ ಇಲ್ಲ. ಕೆ.ಇ.ಬಿ.ಗೆ ದುಡ್ಡು ಕಟ್ಟುವಾಗ ಚೆಕ್ ಹಿಂದೆ ಗ್ರಾಹಕ ನಂಬರ್ 121201 ಬರೆಯಲೇಬೇಕು.

ನಮ್ಮ ಹೋಮಿಯೋಪತಿ ಡಾಕ್ಟರ್ ಬಳಿ ಹೋದಾಗ ಅವರು 'ಹೇಗಿದ್ದೀರಿ? ಏನಾಗಿದೆ?' ಎಂದು ಮೊದಲು ಕೇಳುವದಿಲ್ಲ 'ನಿಮ್ಮ ನಂಬರ್ ಎಷ್ಟು?' ಎಂದೇ

ಕೇಳುತ್ತಾರೆ. 1021 ಎಂದಾಗ ತಮ್ಮ ದಾಖಲಾತಿ ಪುಸ್ತಕದಲ್ಲಿ ಆ ಹಾಳೆಯನ್ನು ತೆರೆಯುತ್ತಾರೆ. ನಂತರ ಕುಶಲೋಪರಿ ಆದರೆ ಆಲೋಪತಿ ವೈದ್ಯರು ನಂಬರ್ ಕೇಳುವದಿಲ್ಲ ಹೇಳುತ್ತಾರೆ. ತೋಳಿಗೆ ಬಟ್ಟೆ ಸುತ್ತಿ, ತಮ್ಮ ಕೈಲಿರುವ ಹಾರ್ನ್ ಒತ್ತುತ್ತಾ, ಹಾಗೆಯೇ ನನ್ನ ನಾಡಿ ಬಡಿತ ಆಲಿಸಿ ದಿಢೀರೆಂದು 130/90 ಎಂದೋ 120/100 ಎಂದೋ ಹೇಳುತ್ತಾರೆ. ನೀವು ಬಿ.ಪಿ. ಪೇಷಂಟ್ ಆಗಿದ್ದರೆ ಅದು ಅಂದಿನ ನನ್ನ ರಕ್ತದೊತ್ತಡ ಎಂದು ನಿಮಗೆ ಗೊತ್ತಾಗುತ್ತದೆ. ಮುಂದಿನ ಸಲ ಬಂದಾಗ ಹೊಸ ನಂಬರ್ ಹಳೆಯದೊಂದಿಗೆ ಹೋಲಿಸಬೇಕಾಗಿ ಬರುತ್ತದೆ. ಆಗಾಗ್ಗೆ, ನನ್ನ ಕೊಬ್ಬು ಹೆಚ್ಚಿದಾಗ - ಕ್ಷಮಿಸಿ, ಶರೀರದ ಕೊಬ್ಬು, ಮನಸ್ಸಿನದಲ್ಲ - ಕೊಲೆಸ್ಟರಾಲ್ ಎಷ್ಟಿದೆ ಎಂದು ಅಳೆಯಬೇಕು. ಅದು ನಾರ್ಮಲ್ 220 ಗಿಂತ ಎಷ್ಟು ಹೆಚ್ಚಿದೆ ಎಂದು ಗೊತ್ತಾಗುತ್ತದೆ. ಮೊನ್ನೆ ತಿರುಪತಿ ತಿಮ್ಮಪ್ಪ ಲ್ಯಾಟರೇಟರಿಗೆ ಹೋದಾಗ ಅವರು ಫಾಸ್ಟಿಂಗ್ ಬ್ಲಡ್ ಗ್ಲುಕೋಸ್ 96 ಇದೆ 150 ಇರುವವರೆಗೂ ಪರವಾಗಿಲ್ಲ ನಿಮಗೆ ಸಕ್ಕರೆ ಕಾಯಿಲೆ ಇಲ್ಲ ಎಂದು ಘೋಷಿಸಿ ಇತರ ಪರೀಕ್ಷೆಗಳ ... ನಂಬರ್‌ಗಳನ್ನು ನೀಡಿದರು.

ಈಗೀಗ ಏನು ಉಪಕರಣಗಳನ್ನು ಕೊಂಡರೂ ಅದಕ್ಕೆ ನಂಬರ್ ಇದ್ದೇ ಇದೆ. ಟೀವಿ ಎಂದರೆ ಕಲರ್/ಬ್ಲಾಕ್ ಎಂಡ್ ವೈಟ್ ಎಂದರೆ ಸಾಲದು. ನಮ್ಮ ಕಲರ್ ಟಿವಿಗೆ ಬಿಡಿಭಾಗ ಬೇಕಾದಾಗ ಅದರ ನಂಬರ್ 'ವಿಕ್ಟರ್ 9041' ಎಂದು ಹೇಳಬೇಕಾಯಿತು. ಮೊನ್ನೆ ಮಗಳು ವಿಸಿಆರ್ ತಂದಾಗ ಅದು 'ಇಡಿ 60ಎಂಇ' ಆರ್ಗನೈಸರ್ ಎಂಬ ಉಪಕರಣ 'ಪಿಎಸ್ 61555' ವಾಷಿಂಗ್ ಮೆಷೀನ್ ಕೊಂಡಾಗ ಅದು 'ಎಬಿ ಎಸ್45' ಆಗಿತ್ತು. ನಮ್ಮ ಇಸ್ತ್ರೀ ಪೆಟ್ಟಿಗೆಗೂ ಒಂದು ನಂಬರ್ ಇರಬಹುದೇನೋ ನೋಡಿಲ್ಲ. ಗಡಿಯಾರ? ಓಸಿ, ಮಟ್ಕಾ ನಂಬರ್‌ಗಳ ಕತೆ ಗೊತ್ತಿಲ್ಲ.

ಅಂದ ಹಾಗೆ ನಮ್ಮ ಮನೆಗೆ ಬರಬೇಕಾದರೆ 279, 279ಇ, 279ಸಿ, 279ಜಿ, 279ಎಫ್ ಬಸ್ ಹತ್ತಬೇಕು. 279ಬಿ ಹತ್ತಬೇಡಿ ದಾರಿ ತಪ್ಪುವಿರಿ. ಪುಷ್ಪಕ್ ಬೇಕೆ? '9' ಹತ್ತಿ. ಪೋಲಿಸ್ ಬೇಕೆ? 100 ಹೊಯ್ಸಳ? 103, ಬೆಂಕಿ? 101. ಅಂದಹಾಗೆ ಕೆಇಬಿಯವರು ಸಹ ಅನೇಕ ನಂಬರ್ ಕೊಡ್ತಾರೆ. ಆದರೆ ಫೋನ್ ಮಾಡಿದರೆ ಆಕಡೆ ಎತ್ತುವವರು ಇರುವದಿಲ್ಲ. ಅದು ಬೇರೆ ವಿಷಯ ಬಿಡಿ.

ಈ ನಂಬರ್‌ಗಳೆಲ್ಲ ಒಂದು ಕಡೆ ಸಂಗ್ರಹಿಸಿಡಲು ಕಂಪ್ಯೂಟರ್ ಕೊಳ್ಳುವ ಎಂದರೆ ಅಲ್ಲೂ ನಂಬರ್ ಕಾಟ-500 ಎಂಎಚ್‌ಜಡ್ 64 ಎಂಬಿ 8 ಜಿಬಿ ನಿಮ್ಮ ಬಜೆಟ್ ತಕ್ಕಂತೆ ಈ ನಂಬರ್ ಬದಲಾಗುತ್ತದೆ.

ಅಂದ ಹಾಗೆ ಈ ನನ್ನ ಸಮಸ್ಯೆಯನ್ನು ನಿಮ್ಮ ಮುಂದೆ ನಾನು ತೋಡಿಕೊಳ್ಳಲು ಬಳಸಿದ್ದು ರೆನಾಲ್ಡ್ಸ್ 0.45 ಪೆನ್!

ರಿಪೇರಿ

– ಕಂ.ಭಂ. ಕೃಷ್ಣಮೂರ್ತಿ

ಅಡವೆಪ್ಪನವರ ಭಾವಮೈದ ಸಾಲಿಮನಿ ಬೆಂಗಳೂರಿಗೆ ಬಂದನೆಂದರೆ ರೇಸ್ ಸೀಸನ್ ಪ್ರಾರಂಭವಾಗಿದೆಯೆಂದೇ ಅರ್ಥ. ಸೋಲುವ ಕುದುರೆಗಳ ಮೇಲೆ ಹಣ ಕಟ್ಟೀ ಕಟ್ಟೀ ಕುದುರೆಯೊಂದಿಗೆ ತಾನೂ ಸೋತು ಸೊಪ್ಪಲಾಗಿ, ಊರಿಗೆ ಹಿಂದಿರುಗುತ್ತಿದ್ದ. ಸಾಲಿಮನಿ ಸೀಜನ್ ಮುಗಿಯುವವರೆಗೂ, ಅಡವೆಪ್ಪನವರ ಮನೆಯಲ್ಲೇ ಬಿಡಾರ ಹೂಡುತ್ತಿದ್ದ. ತಮ್ಮನಿಗೆ ಊಟೋಪಚಾರ ಮಾಡುವುದರಲ್ಲಿ ಮಂಗೆಮ್ಮ ದಣಿದು ಸುಸ್ತಾಗುತ್ತಿದ್ದಳು ಭಾವ ಮೈದುನನ ಅಶ್ವಶಾಸ್ತ್ರದ ವಿವರಗಳನ್ನು ಕೇಳಿ, ಕೇಳಿ ಅಡವೆಪ್ಪನವರಿಗೆ ತಲೆ ಚಿಟುಗಟ್ಟಿ ಹೋಗುತ್ತಿತ್ತು. ಯಾರಿಗೆ ಏನೇ ಆದರೂ ಸಾಲಿಮನಿ ಯಾವ ಮುಲಾಜೂ ಇಲ್ಲದೆ ತನ್ನ ಕುದುರೆ ರೇಸಿನ ಕಾರ್ಯಕ್ರಮವನ್ನು ನಿಷ್ಠೆಯಿಂದ ನಡಸಿಕೊಂಡು ಬಂದಿದ್ದ.

ಆದಿನ, ಕಿಗ್ಗಲು ನಾಮ ಸಂವತ್ಸರದ, ಹರಿದು ಛಿದ್ರವಾಗಿ, ಕಡ್ಡಿಗಳು ಬೆಸುಗೆ ಬಿಟ್ಟುಹೋಗಿದ್ದ, ಛತ್ರಿ ಆಕಾರದ ಪದಾರ್ಥವನ್ನು, ದುರಸ್ತಿ ಮಾಡಲು ರಿಪೇರಿಯವನಿಗೆ ಕೊಟ್ಟು, ಅಂಗಳದಲ್ಲಿ ಅವನನ್ನು ಕೂಡಿಸಿ, ಅಡವೆಪ್ಪ ದಂಪತಿಗಳು, ಅವನು ರಿಪೇರಿ ಮಾಡುವ ದುಃಸಾಹಸವನ್ನೇ ನೋಡುತ್ತಾ ನಿಂತಿದ್ದಂತೆಯೆ, ಸಾಲಿಮನಿ ಅವರ ಮುಂದೆ ಧುತ್ತೆಂದು ಪ್ರತ್ಯಕ್ಷನಾಗಿದ್ದ. ವಾರದ ಕೆಳಗೆ ಬಂದು ಸೀಜನ್ ಮುಗಿಸಿ ಹೋದವನು ಮತ್ತೆ ಬಂದು ನಿಂತಿದ್ದು ನೋಡಿ ಅಡವೆಪ್ಪನವರಿಗೆ ತಲೆ ಶೂಲೆ ಬಂದಂತಾಯ್ತು.

''ಏನಪಾ ಸಾಲಿಮನಿ, ನಿನ್ನ ಕುದುರಿ ರೇಸು ಮತ್ತ ಪ್ರಾರಂಭ ಆತೇನು?'' ಎಂದು ಅವರು ವಿಚಾರಿಸಿದರು.

''ನಾ ಈ ಧಫ ಬಂದಿರೋದು ಅದಕ್ಕಲ್ಲ ಭಾವಾಜಿ. ದೊಡ್ಡಗೌಡರ ಧರ್ಶನಕ್ಕೆ ಬಂದೀನಿ''... ಎಂದು ಹೇಳಿ ಹಲ್ಲು ಕಿರಿದ ಸಾಲಿಮನಿ.

''ದೊಡ್ಡ ಗೌಡರೂಂದ್ರೆ ಯಾರಪಾ ತಮ್ಮ, ಕುದುರಿ ಓಡಿಸೋ ಜಾಕೀನೇನು?'' ಎಂದು ಅಡವೆಪ್ಪನವರು ಕೇಳಿದರು. ಸಾಲಿಮನಿ ವ್ಯವಹಾರವೆಲ್ಲ ಅಶ್ವಕ್ಕೆ ಸಂಬಂಧಪಟ್ಟಿದ್ದೆಂದೇ ಅವರ ಭಾವನೆ.

''ಇದೇನು ಭಾವಾಜಿ. ಇಷ್ಟು ಬ್ಯಾಗ ನಮ್ಮ ಗೌಡರ್ನ ಮರ್ತು ಕುಂತ್ರಲ್ಲ, ಮಾಜಿ ಸಿ.ಎಮ್ಮು, ಮಾಜಿ ಪಿ.ಎಮ್ಮು, ಮಣ್ಣಿನ ಮಗನಾಗಿ ಮಂದಿ ಸೇವಾ ಮಾಡ್ದೋರು...''

''ಓ ಗೊತ್ತಾತು ಬಿಡಪ್ಪ. ನಮ್ಮ ದೇವೇಗೌಡರ್ನ ಹೇಳ್ಲಿಕ್ಕೆ ಹತ್ತಿ ಅಂತಾತು. ಅವರ್ನ ಯಾಕಪಾ ನೋಡ್ಲಿಕ್ಕೆ ಹೊಂಟಿ. ಅವರೂ ನಿನ್ನ ಕುದುರಿ ಹಾಂಗೆ ಸೋತು ಕುಂತಾರೆ. ಇನ್ನ ನೀ ಹೋಗಿ, ಸೋಲು ಕುದುರಿ ಯಾವ್ದೂಂತ ಅವರ್ಗೆ ತಿಳಿಸಿ ಕೊಡ್ಲಿಕ್ಕೆ ಹತ್ತಿಯೇನು...?''

ಹಾಂಗಲ್ಲ ಭಾವಾಜಿ. ನಮ್ಮ ಮರ ಕುಂಟೆನಾಗೆ ಗೌಡರ ಅಭಿಮಾನಿ ಸಂಘ ಕಟ್ಲಿಕ್ಕೆ ಹತ್ತೀನ್ರಿ. ಅದಕ ಉದ್ಘಾಟನ ಮಾಡ್ಲಿಕ್ಕೆ ಅವರ್ನ ಕೇಳ್ಲಿಕ್ಕೆ ಬಂದೀನ್ರಿ...''

''ಅಲ್ಲೋ ಸಾಲಿಮನಿ, ನಿನ್ನ ತಲಿಯಾಗೆ ಏನಪಾ ತುಂಬೈತಿ? ಗೌಡರ ಅಭಿಮಾನಿ ಸಂಘಾನ ಗೌಡರೇ ಉದ್ಘಾಟನಾ ಮಾಡ್ಲಿಕ್ಕೆ ಬರ್ತ್ತದೇನಪ. ಹಾಂಗೂ ಈ ಅಭಿಮಾನಿ ಸಂಘ ಪಂಘ ಎಲ್ಲಾ ಸಿನಿಮಾದೋರಿಗೆ ಮಾಡಿರೋದಪ. ರಾಜಕೀಯ ಮಂದಿಗೆ ಇದೆಲ್ಲಾ ಬರವಲ್ದು ನೋಡು ತಮ್ಮ...'' ಎಂದು ಅಡವೆಪ್ಪನವರು ತಿಳಿ ಹೇಳಿದರು. ಆದರೆ ತಿಳುವಳಿಕೆ ಮಾತನ್ನೂ ಕೇಳುವ ತಾಳ್ಮೆ ಸಾಲಿಮನಿಗೆಲ್ಲಿ ಬರಬೇಕು. ಅವನು ಅವರ ಮಾತೆ ಕಿವಿಗೆ ಬೀಳದವನಂತೆ ''ಗೌಡ್ರು ಊರ್ನಾಗೆ ಇಲ್ಲೇನು?'' ಎಂದು ಕೇಳಿದ.

''ಅವರು ಹ್ಯಾಂಗಪಾ ಊರ್ನಾಗೆ ಇರ್ತಾರೆ, ಮುದ್ದಿ ಉಂಡು ನಿದ್ದಿ ಮಾಡ್ಲಿಕ್ಕೆ ಈಗ ಸವಡೆಲ್ಲಿದೆ ಅವರಿಗೆ, ಚುನಾವಣೆನಾಗೆ ತಮ್ಮ ಪಕ್ಷ ಯಾಕ ಪರಾಜಯ ಆತು, ಇದಕ್ಕೆ ಕಾರಣ ಏನೈತಿ ಅನ್ನೂದನ್ನ ಗೌಡರು, ಸಿದ್ರಾಮಣ್ಣೋರು ಹುಡುಕ್ಲಿಕ್ಕೆ ಹತ್ತ್ಯಾರೆ, ಇಕಾ ಆ ಛತ್ರಿ ರಿಪೇರಿ ಮಾಡ್ತಾ ಕುಂತಾನಲ್ಲ ಅವನ ಹಾಂಗೆ ಗೌಡರು ಪಾರ್ಟಿ ರಿಪೇರಿ ಮಾಡ್ಲಿಕ್ಕೆ ಹೊಂಟ್ಯಾರೆ. ಕಾರ್ಯಕರ್ತರ ಸಭಾಕೂಡಿಸಿ, ಆತ್ಮಾವಲೋಕನ ಮಾಡ್ಕಂಡು, ಎಲ್ಲಾ ಕ್ಷೇತ್ರದಾಗೂ ಅಡ್ಡಾಡಿಕೋತಾ ಅದಾರೆ. ರಾಜಕೀಯ ಮಂದಿ ಹಾಂಗೆ ಗಪ್ ಕೂಡ್ಲಿಕ್ಕೆ ಬರವಲ್ದು ನೋಡಪಾ. ಅವರು ನಿನ್ನ ಕೈಗೆ ಈಗ ಸಿಗೂಹಾಂಗಿಲ್ಲ, ನೀನು ಊರಿಗೆ ವಾಪಸು ಹೋಗೋದು ಛಲೋಐತಿ...'' ಅಡವೆಪ್ಪನವರು ಸಾಲಿಮನಿಯನ್ನು ಸಾಗಿ ಹಾಕುವ ಪ್ರಯತ್ನ ಮಾಡಿದರು.

ಅದೇ ವೇಳೆಗೆ ಛತ್ರಿ ರಿಪೇರಿಯವನೂ ಕೈಕೊಡವಿ ಎದ್ದು ಹೊರಟ ''ನನ್ನ ಸರ್ವೀಸ್‌ನಾಗೇ ಇಂಥ ಛತ್ರಿ ನೋಡಿಲ್ರಿ ಸರ್ರ ಒಂದು ಕಡೀಂದ್ರ ಕಡ್ಡಿ ಜೋಡಿಸಿ ತೇಪೆ ಹಾಕಿದ್ರೆ, ಮತ್ತೊಂದು ಕಡೀಂದ ಬಿಚ್ಚಿಕೊಂಡು ಬರ್ತ್ತದ್ರಿ. ಇದರ ರಿಪೇರಿ ಆಗೂ ಹಾಂಗಿಲ್ಲ ಸಾಹೇಬ್ರ'' ಎಂದು ಹೇಳಿ ರಿಪೇರಿಯವನೂ ಹೊರನಡದ.

''ದೊಡ್ಡ ಗೌಡರು ಕೈಕೊಂಡಿರುವ ಪಾರ್ಟಿ ರಿಪೇರಿ ಕೆಲಸವೂ ಈ ಛತ್ರಿ ರಿಪೇರಿಯ ತರಹೆ ಆದರೆ ಗತಿಯೇನು?'' ಎಂಬ ಚಿಂತೆ ಗೌಡರ ಅಭಿಮಾನಿ ಸಾಲಿಮನಿಯನ್ನು ಕಾಡಿತು.

ಮನವೊಲಿಕೆ

- ಗೌತಮ

ಗೋಲ್ಡನ್ ಹ್ಯಾಂಡ್‌ಷೇಕ್ ಕೊಟ್ಟಾದರೂ ಒಂದಷ್ಟು ಉಂಡಾಡಿ ಗುಂಡರನ್ನ, ದಂಡಪಿಂಡಗಳನ್ನು (ಹಾಗೆಂದು ಹೇಳದಿದ್ದರೂ) ಮನೆಗೆ ಕಳಿಸುವ ಹುನ್ನಾರ ಮ್ಯಾನೇಜ್‌ಮೆಂಟಿಂದು. ಆ ಮೂಲಕವಾದರೂ ಅವರಿಗೆ ಕೊಡೋ ಸಂಬಳ ಸೌಲಭ್ಯಗಳುಳಿದು, ನಷ್ಟ ಕಡಿಮೆ ಆಗಿ, ಲಾಭ ಹೆಚ್ಚಾಗಲಿ ಅನ್ನೋದು ಅದರ ಉದ್ದೇಶ. ಆದರೆ, ಮ್ಯಾನೇಜ್‌ಮೆಂಟು ಅಂದುಕೊಳ್ಳೋದೊಂದಾದರೆ ಅದಾಗೋದೇ ಇನ್ನೊಂದು. ಮ್ಯಾನ್ ಪ್ರಪೋಸಸ್, ಗಾಡ್ ಡಿಸ್ಪೋಸಸ್ ಅಲ್ವೇ? ದಂ.ಪಿ. ಗಳು, ಉಂ.ಗುಂ. ರುಗಳು ಮನೇಲಿದ್ದರೇನು, ಫ್ಯಾಕ್ಟರೀಲಿದ್ದರೇನು, ಅವರಿಗೆ ಬರೋ ಸಂಬಳ ಒಂದನೇ ತಾರೀಖಿಗೆ ಸರಿಯಾಗಿ ಬಂದೇ ಬರುತ್ತೆ. ಫ್ಯಾಕ್ಟರೀಗೆ ಹೋದರೆ ಹೆಂಡತಿಯ ಕಾಟವಿಲ್ಲ, ಹೊತ್ತು ಹೊತ್ತಿಗೆ ತಿಂಡಿ, ಕಾಫಿ, ಊಟ, ಆರಾಮವಾದ ಬದುಕು. ಯಾಕೆ ವಿಯಾರ್ (ವಿ.ಆರ್. ವಾಲೆಂಟರಿ ರಿಟೈರ್‌ಮೆಂಟ್) ತೊಗೋಬೇಕು ಅದೂ ನಿಜಾನೇ ಅನ್ನಿ. ಆದರೆ, ಆಗ್ತಿರೋದೇನೂಂತಂದ್ರೆ, ದಂ.ಪಿಂ.ಗಳ ಬದಲು ನಿಜವಾಗಿ ಶ್ರದ್ಧೆಯಿಂದ, ನಿಷ್ಠೆಯಿಂದ, ನಿಯತ್ತಿನಿಂದ ದುಡಿಯುತ್ತಿರುವವರು ವಿ.ಆರ್. ತಗೊಂಡು ಹೋಗ್ತಿದಾರೆ. ಮಾಡಿದ್ದುಣ್ಣೋ ಮಹರಾಯ! 'ಚಿನ್ನದ ಕೈ ಕೊಡ್ತೀನಿ' (ಅದೇ ಗೋಲ್ಡನ್ ಷೇಕ್ ಹ್ಯಾಂಡ್) ಅಂತ ಡಂಗೂರ ಸಾರಿದ್ದು? ಸಾರಿದ ಮೇಲೆ ಹೋಗ್ತೀನಿ ಅನ್ನೋರ್ನ ಕಳಿಸಿಕೊಡಬೇಕಪ್ಪ. ಆಗೋಲ್ಲ ಅನ್ನೋಕೆ ಆಗದಿದ್ದ ಮೇಲೆ ಉಳಿಸಿಕೊಳ್ಳಬೇಕಾದರೆ ಅನುನಯಿಸೋದೊಂದೇ ,ಉಳಿದಿರೋ ಮಾರ್ಗ.

ಇಲ್ಲೊಂದು ಮುಖ್ಯವಾದ ವಿಷಯಾನ ಹೇಳಬೇಕು. ಅದು ವಾಜಪೇಯಿ ಸರ್ಕಾರಕ್ಕೆ ಸಂಬಂಧಿಸಿದ್ದು. ಇಮಾಂ ಸಾಬಿ ಗೋಕುಲಾಷ್ಟಮಿಗಳ ಸಂಬಂಧದ ಕಥೆ ಹೇಳ್ತಿದೀನಿ ಅಂತ ತಿಳ್ಕೋಬೇಡಿ. ವಾಜಪೇಯಿ ಸರ್ಕಾರ ಬಂದಮೇಲೇನೇ ಐವತ್ತೆಂಟಿದ್ದ ನಿವೃತ್ತಿ ವಯಸ್ಸನ್ನ ಅರವತ್ತಕ್ಕೇರಿಸಿದ್ದು. ಮನೆಗೆ ಹೋಗಬೇಕಾಗಿದ್ದವರಿಗೆಲ್ಲ ಎರಡು ವರ್ಷದ ಎಕ್ಸ್‌ಟೆನ್ಶನ್ ಸಿಕ್ಕಿತು. ಈ ಎರಡು ವರ್ಷದ ಬಾಲಂಗೋಚಿಯೇ ಒಂಥರದ ಸಿಲ್ವರ್ ಹ್ಯಾಂಡ್ ಷೇಕು. ಈ ಎರಡು ವರ್ಷದಲ್ಲಿ ಅರ್ಧವರ್ಷ ಕಳಿತಿದ್ದ ಹಾಗೇ ಗುಸು ಗುಸು ಪಿಸ ಪಿಸ ಮತ್ತೆ ನಿವೃತ್ತಿ

ವಯಸ್ಸನ್ನ ಐವತ್ತೆಂಟಕ್ಕೆ ಇಳಿಸ್ತಾರಂತೆ ಅಂತ. ಎಲ್ಲ ಅಂತೆ ಕಂತೆ. 'ಸರ್ವಿಸ್ ಎಷ್ಟಿದೆ' ಅಂತ ಕೇಳಿದರೆ ನಾಲ್ಕು ವರ್ಷ ಅನ್ನೋಲ್ಲ ಬದಲಿಗೆ ಎರಡು ಪ್ಲಸ್ ಎರಡು ಅಂತಲೇ ಹೇಳೋದು. ಹಾಗೆ ಪ್ಲಸ್ ಎರಡು ವಾಯಪೇಯಿ ಸಾಹೇಬರ ಕೃಪೆ. ಈ ಎರಡೂ ಪ್ಲಸ್‌ನಿಂದ ಹಿಡಿದು ಆರು ತಿಂಗಳವರೆಗೂ ಸರ್ವಿಸ್ ಇರೋರು ವಿಯಾರ್ ತಗೊಂಡರೆ ಜೀವನದಲ್ಲಿ ಕಂಡಿರದಂಥಷ್ಟು ಹಣ! ಯಾರಿಗುಂಟು ಯಾರಿಗಿಲ್ಲ!!

ಮೂಲ ಕಥೆಯನ್ನು ಮತ್ತೆ ಮುಂದುವರೆಸೋಣ ಎಲ್ಲಿದ್ವಿ? ಹಾಂ. ಅನುನಯಿಸೋದರಲ್ಲಿದ್ವಿ...

ಅರ್ಜಿ ಕೊಟ್ಟವರಲ್ಲಿ ಕಂಪೆನಿಗೆ ಬೇಕಾದವರೂ ಇರ್ತಾರೆ, ಬೇಡವಾದವರೂ ಇರ್ತಾರೆ. ಕಂಪೆನಿಗೆ ಬೇಕಾದವರನ್ನು ಮಾತ್ರ 'ನೀವು ಅರ್ಜಿ ಕೊಡಬೇಡೀಪ್ಪ, ನೀವುಗಳೇ ಸಂಸ್ಥೆಯ ಬೆನ್ನೆಲುಬು. ನೀವೇ ಸಂಸ್ಥೇನ ಬಿಟ್ಟು ಹೋಗಿಬಿಟ್ಟರೆ ಹೇಗೆ?' ಅಂತ ಮನವೊಲಿಸಿ, ಉಳಿದವರನ್ನು ಗುಡ್, ಒಳ್ಳೆಯ ನಿರ್ಧಾರ ತಗೊಂಡಿದ್ದೀರಿ. ಉಂಡಾಡಿ ಗುಂಡರುಗಳಾಗಿ, ದಂಡಪಿಂಡರುಗಳಾಗಿ ಸಂಸ್ಥೇಲಿ ಮುಂದುವರೆಯೋದು ನಮಗೂ ಇಷ್ಟವಿಲ್ಲ, ಅದು ಕಂಪೆನಿಗೂ ನಷ್ಟವೇ. ಹೋಗ್ಬಿಟ್ಟು ಬನ್ನಿ. ದೇವರು ಒಳ್ಳೇದು ಮಾಡಲಿ ಬೈ' ಅಂತ ಬೀಳ್ಕೊಡೋಕಾಗುತ್ತೇ? ಹಾಗಾಗಿ ಯಾರೇ ಅರ್ಜಿ ಕೊಟ್ಟರೂ, ಅದನ್ನ ಅಂಗೀಕರಿಸುವ ಮುಂಚೆ ಅವರನ್ನ ಕೊನೆಯ ಬಾರಿಗೆ ಒಂದು ಮಾತು ಕೇಳಿ ನಿವೃತ್ತಿ ತೆಗೆದುಕೊಳ್ಳುವುದನ್ನು ತಡೆಯುವುದು ವಾಡಿಕೆ. ಈ ಕ್ರಿಯೆಯಲ್ಲಿ ಒಬ್ಬೊಬ್ಬ ಅಭ್ಯರ್ಥಿಯ ಜೊತೆಗೂ ನಡೆಯುವ ಮಾತುಕತೆಗಳು ಹೇಗಿರುತ್ತವೆ ಎಂಬುದು ನಿಮ್ಮ ಕಲ್ಪನೆಗೆ ಬಿಟ್ಟದ್ದು. ನಿಮ್ಮ ಕೈಲಿ ಕಲ್ಪಿಸಿಕೊಳ್ಳಲಾಗದಿದ್ದರೆ ಮುಂದೆ ಒಂದು ಸ್ಯಾಂಪಲ್ ನೀಡುವೆ.

ಹೀಗೆ ಅನುನಯಿಸೋದಕ್ಕೆ ಅಂತಲೇ ಒಂದು ತ್ರೀಮೆನ್ ಕಮಿಟಿ ಅಂದರೆ ತ್ರಿ ಸದಸ್ಯ ಸಮಿತಿ - ವೆಂಕ, ಶೀನಿ, ನಾಣಿಯರೇ ಸಮಿತಿಯ ಸದಸ್ಯರು. ಕಮಿಟಿ ತ್ರೀ ಮೆನ್‌ದಾದರೂ ಮನವೊಲಿಕೆಗೆ ಕೈ ಹಾಕುವವರು ಒಬ್ಬರೇ. ಆ ಒಬ್ಬರು ಯಾರು ಅನ್ನೋದು ಮನವೊಲಿಕೆಗೆ ಒಳಗಾಗುವ ವ್ಯಕ್ತಿಯ ಮೇಲೆ ಡಿಪೆಂಡಿಂಗ್ ಅಪಾನು.

ಇವತ್ತು ಒಂದು ಕೇಸ್ ಬಂತು - ಅಂದರೆ ಸ್ವಯಂ ನಿವೃತ್ತಿಯ ಅರ್ಜಿ ಬಂತು. ಅರ್ಜಿದಾರನ ವಯಸ್ಸು ಅರವತ್ತು ಮೈನಸ್ ಮೂರು ಮಾಡಿದ ಮತ್ತು ಉಳಿದ ಸೇವೆಯ ಆಧಾರದ ಮೇಲೆ ಆತನಿಗೆ ಸ್ವಯಂ ನಿವೃತ್ತಿ ನೀಡಿದರೆ ಕೈಗೆ (ಆತನ) ಮೊತ್ತ ಸುಮಾರು ಆರು ಲಕ್ಷ ಆತನ ಸಂಸಾರ ಅಂದರೆ, ಹೆಂಡತಿ , ಇಬ್ಬರು

ಮಕ್ಕಳು. ಒಂದು ಗಂಡು ಒಂದು ಹೆಣ್ಣು. ಹುಡುಗ ಅಂತಿಮ ಬಿ.ಇ., ಹುಡುಗಿ ತಾಳಿಗೆ ಕತ್ತನ್ನೊಡ್ಡಲು ಸಿದ್ಧ. ಸ್ವಂತ ಮನೆ. ಒಟ್ಟಿನಲ್ಲಿ ಸುಖೀ ಸಂಸಾರ. ಮಗಳ ಮದುವೆಗೆ ಒಂದೆರಡು ಲಕ್ಷ ಸಾಲ ಮಾಡಿದರೂ ಚಿಂತೆಯಿಲ್ಲ ನಿವೃತ್ತನಾಗೋಷ್ಟರೊಳಗೆ ಋಣ ಮುಕ್ತನಾಗಿ, ಆಮೇಲೂ ಸುಖವಾಗಿರಬಹುದು. ಹಾಗಾಗಿ ಒಳ್ಳೆಯ ಒಬ್ಬ ಕಾರ್ಮಿಕನೊಬ್ಬನನ್ನು ಹೇಗಾದರೂ ಮಾಡಿ ಉಳಿಸಿಕೊಳ್ಳುವ ಹಂಬಲದಿಂದ ಆತನನ್ನು ಆಫೀಸಿಗೆ ಕರೆಸಿದೆ, ಕೂರಿಸಿದೆ, ಬಿಸಿ ಬಿಸಿ ಕಾಫಿ ತರಿಸಿದೆ.

'ನಮಸ್ಕಾರ ಸಾರ್'

'ನಮಸ್ಕಾರಾ - ನೀವೇ ಈ ಕಂಪೆನಿಯ ಆಧಾರ ಸ್ಥಂಭ. ನಿಮ್ಮಂಥೋರು ನಮ್ಮನ್ನು ಬಿಟ್ಟು ಹೋದರೆ ನಾವು ಸಂಸ್ಥೇನ ನಡೆಸೋದು ಹೇಗೆ?' ಅಂದರೆ ಆಲ್‌ಮೋಸ್ಟ್ ಗೋಗರೆಯುವ ಧಾಟಿಯಲ್ಲಿ.

'ಅಯ್ಯೋ ಹಾಗೆಲ್ಲ ಹೇಳಬೇಡಿ ಸಾರ್ ನನ್ನ. ಹಾಗೆ ಬೇಕಾದಷ್ಟು ಆಧಾರಸ್ತಂಭಗಳಿವೆ. ಏನೂ ಯೋಚನೆಯಿಲ್ಲ. ಅದೂ ಅಲ್ದೆ ನಿಮ್ಮಂಥೋರು ಎಂಥೋರ ಹತ್ತಿರ ಬೇಕಾದರೂ ಕೆಲಸ ತೆಗೀತೀರ' ಅಂತ ನನಗೇ ತಿರುಮಂತ್ರ ಹಾಕಿದ. ನಿಧಾನಕ್ಕೆ ಚೆನ್ನಾಗಿ ಯೋಚನೆ ಮಾಡಿದ್ದೀರೇನಪ್ಪಾ?'

'ಮಾಡಿದ್ದೀನಿ ಸಾರ್.'

'ಸರೀ, ಆದರೆ ನಿಮಗೆ ವಿ.ಆರ್. ತಗೊಳ್ಳೋ ಅಂಥ ತೊಂದರೆ ಏನೂಂತ ಕೇಳಬಹುದಾ?'

'ಸಾರ್, ನಾನು ನೇರವಾಗಿ ಕೇಳಿಬಿಡ್ತೀನಿ. ನನಗೇನೂ ವಿ.ಆರ್. ತಗೋಬೇಕೂಂತ ಆಸೆಯೇನು ಇಲ್ಲ. ಕೆಲಸ ಮಾಡೋ ಆಸೇನೂ ಇದೆ, ಆಸಕ್ತೀನೂ ಇದೆ. ಮನೇಲಿ ಕೂತು ಕಾಲ ಕಳೆಯೋದೂ ಕಷ್ಟವೇ....'

'ಮತ್ತೆ? ಮತ್ತೆ ಯಾಕೆ ವಿ.ಆರ್. ತಗೋತಿದೀರ?' ಜುಟ್ಟಿನ ಕೂದಲೊಂದು ಸಿಕ್ಕಿತೆಂಬ ಖುಷಿಯಿಂದ ಕೇಳಿದೆ.

'ಏನಿಲ್ಲ ಸಾರ್. ಅರ್ಜೆಂಟಾಗಿ ನನಗೆ ಎರಡು ಲಕ್ಷ ಬೇಕಾಗಿತ್ತು.'

'ಅದಕ್ಕೆ?'

'ಅದಕ್ಕೇ ಸಾರ್ ವಿ.ಆರ್. ಕೊಡ್ತಿರೋದೂ'

'ನೀವು ವಿ.ಆರ್. ತಗೊಂಡರೆ ಆರೇಳು ಲಕ್ಷ ಸಿಕ್ಕುತ್ತಲ್ವೇ?'

'ಅಷ್ಟೊಂದು ಬೇಕಾಗಿಲ್ಲ ಸಾರ್. ಬರೇ ಎರಡು ಲಕ್ಷ ಸಾಕು'

'ಅಷ್ಟೇ ತಾನೇ. ಎರಡು ಲಕ್ಷ ಕೊಡಿಸಿದರೆ ಅರ್ಜೀನ ವಾಪಸ್ ತೊಗೋತೀರಾ?'

''ಓಹೋ, ಖಂಡಿತವಾಗಿ ತಗೋತೀನಿ ಸಾರ್'

'ಇರಿ ಇರಿ' ಅಂದೆ. ಲೇವಾದೇವಿ ಮಾಡೋ ವೆಂಕಟರಮಣನನ್ನ ಫೋನ್ ಮಾಡಿ ಕರೆಸಿದೆ. ಎರಡು ಲಕ್ಷ ಕೊಡಲು ರೆಕಮೆಂಡ್ ಮಾಡಿದೆ, ಒಪ್ಪಿದ.

ಅಬ್ಬ! ಗೆದ್ದೆ! ಅಂದುಕೊಂಡು ದೊಡ್ಡದಾದ ನಿಟ್ಟುಸಿರಿಟ್ಟೆ. 'ನೋಡಿ, ಕೊಡೋಕೆ ವೆಂಕಟರಮಣ ಒಪ್ಪಿಕೊಂಡಿದಾರೆ. ವಾಪಸ್ ತಗೊಳ್ಳಿ' ಅಂತ ಅರ್ಜೀನ ಹಿಂತಿರುಗಿಸುವಷ್ಟರಲ್ಲಿ ವೆಂಕಟರಮಣ ಒಂದೇ ಒಂದು ಪ್ರಶ್ನೆ ಕೇಳಿದ.

'ನೋಡೀ, ನಿಮಗೀಗ ಎರಡು ಲಕ್ಷ ಕೊಟ್ಟರೆ ಯಾವಾಗ ವಾಪಸ್ ಕೊಡ್ತೀರ?'

ಸಾಲ ಕೊಡೋರು, ಸಹಜವಾಗಿ ಕೇಳಬೇಕಾದ ಪ್ರಶ್ನೇನೆ. ಅದರಲ್ಲೇನು ತಪ್ಪು?

ಅರ್ಜಿದಾರ ನನ್ನ ಮುಖ ನೋಡಿದ. ನೋಡೇ ನೋಡಿದ. ಯಾಕೇಂತ ನನಗರ್ಥ ಆಗಲಿಲ್ಲ.

'ಸಾರ್?'

'ಏನು ಹೇಳಿ'

'ಎರಡು ಲಕ್ಷಾನ್ನ ವಾಪಸ್ ಕೊಡಬೇಕೇ?'

ಕೇಳಿದ. ಕೇಳೇ ಕೇಳಿದ ಅದನ್ನು ನಾನು ನನಗೇ ಕೇಳಿಕೊಂಡೆ. ಹೌದು ಅದೂ ಸಹಜವಾದ ಪ್ರಶ್ನೇನೇ? ಅದರಲ್ಲೇನು ತಪ್ಪು. ಯಾಕೇಂದ್ರೆ ಕೊಟ್ಟ ಹಣ ವನ್ನು ಹಿಂತಿರುಗಿಸುವ ಪ್ರಸ್ತಾಪವನ್ನು ಮಾಡಿಯೇ ಇರಲಿಲ್ಲ.

ವೆಂಕಟರಮಣ ಜಾಗ ಖಾಲಿ ಮಾಡಿದ್ದ. ವಾಪಸ್ ಕೊಡಲೆಂದು ಚಾಚಿದ್ದ ಅರ್ಜಿಯನ್ನು ಹಿಂತೆಗೆದುಕೊಂಡೆ. ಅರ್ಜಿದಾರನ ಮುಖ ನೋಡುವ ಸರದಿ ನನ್ನದಾಯಿತು. ನೋಡಿದೆ. ನೊಡೇ ನೋಡಿದೆ. ಅರ್ಜಿಯನ್ನು ಟೇಬಲ್ ಮೇಲಿಟ್ಟೆ... 'ವಿಷ್ ಯು ಹ್ಯಾಪೀ ರಿಟೈರ್ಡ್ ಲೈಫ್' ಅಂತ ಕೈ, ಅಲ್ಲ ಸಿಲ್ವರ್ ಕೈ, ಅಲ್ಲಲ್ಲ ಗೋಲ್ಡನ್ ಕೈ, ಅಲ್ಲ ಅಲ್ಲ, ಛೇ ಛೇ, ಡೈಮಂಡ್ ಕೆಯ್ಯನ್ನ ಕುಲುಕಿದೆ

★★★

ಓ ಹೊ ಹೊ!

– ನಾಚಿ

ಸಂಜೆ ಐದೂವರೆ ಆಗಿತ್ತು. ಎಳೆ ಬಿಸಿಲು ಹಿತವಾಗಿತ್ತು. ಡಬ್ಬಲ್ ರೋಡಿನಲ್ಲಿ ವಾಕಿಂಗ್ ಹೋಗುತ್ತಿದ್ದೆ. ಎದುರಿಂದ ಶಾಲು ಹೊದ್ದುಕೊಂಡು ಯಾರೊ ಬರುತ್ತಿದ್ದರು, ಹತ್ತಿರ ಬಂದಾಗ ಎಲ್ಲೊ ಇವರನ್ನ ನೋಡಿದ್ದೆನಲ್ಲ ಅಂತ ಅಂದುಕೊಳ್ಳುತ್ತಿದ್ದೆ. ಥಟ್ಟನೆ ಜ್ಞಾಪಕಕ್ಕೆ ಬಂತು.

''ಓಹೊಹೊ! ಏನು ನಾರಾಯಣ್'' ಅಂದೆ. ಅವರು ಅನುಮಾನಿಸುತ್ತ ನಿಂತರು.

''ಮ್ಯಾತಮ್ಯಾಟಿಕ್ಸ್ ನಾರಾಯಣ್ ಅಲ್ಲವೇ?'' ಅಂತ ಕೇಳಿದೆ.

''ಹೌದು. ನಿಮ್ಮನ್ನ ಎಲ್ಲಿ ನೋಡಿದ್ದೆ?'' ಅಂತ ಕೇಳಿದರು.

''ನೀವೂ, ಗುಂಡೂರಾವ್ ಯಾವಾಗಲೂ ಜತೇಲೇ ಇರ್ತಿದ್ದರಲ್ಲಾ'' ಅಂದೆ.

''ಹೌದು'' ಎಂದರು.

''ನಿಮ್ಮನ್ನ ನೋಡಿ ನಲವತ್ತು ವರ್ಷವಾಯ್ತು. ಗುಂಡೂರಾವ್ ಹೇಗಿದ್ದಾರೆ?''

''ಅವನಿಗೇನು! ಗುಂಡಕಲ್ಲಿನ ಹಾಗೆ ಇದ್ದಾನೆ'' ಅಂದರು.

''ಅದುಸರಿ. ಅವರು ಮದುವೆ ಮಾಡಿಕೊಂಡರೋ ಅಥವಾ ಬ್ರಹ್ಮಚಾರಿಯಾಗೇ ಇದ್ದಾರೋ?''

''ಮದುವೆಯೂ ಆಗಿ, ನಾಲ್ಕು ಮಕ್ಕಳು, ಒಂದೆರಡು ಮೊಮ್ಮಕ್ಕಳೂ ಇದಾರೆ''

''ಏನಾಶ್ಚರ್ಯ! ಮದುವೆ ಮಾಡಿಕೊಳ್ಳುವವರೆನ್ನೆಲ್ಲಾ ಹಾಸ್ಯ ಮಾಡುತ್ತಿದ್ದರು. ಉಪನಿಷತ್ತು, ವೇದ ಅಂತ ಅಭ್ಯಾಸ ಮಾಡ್ತಿದ್ದರಲ್ಲ ಅದು ಹೇಗೆ ಇಷ್ಟು ಬದಲಾಯಿಸಿದರು? ಅದಕ್ಕೆ ಹೇಳೋದು ಮನುಷ್ಯನ ಸ್ವಭಾವ ಒಂದೇ ಸಮ ಇರಲ್ಲ'' ಅಂದೆ.

''ಏನು? ಗುಂಡ ಯಾವತ್ತು ಉಪನಿಷತ್ತು ಓದಿದ?'' ಅಂತ ಅಂದರು.

''ಅಲ್ಲಾ ಸಾರ್, ನೀವೂ ಗುಂಡೂರಾವ್ ದಿನಾ ಬೆಳಗ್ಗೆ ಶಂಕರಮಠದಲ್ಲಿ ಉಪನಿಷತ್ತು ಕಲಿಯೋಕ್ಕೆ ಹೋಗ್ತಿರಲಿಲ್ಲವೇ?'' ಅಂತ ಕೇಳಿದೆ.

''ಇಲ್ಲವಲ್ಲಾ. ನೀವು ಯಾವ ಗುಂಡೂರಾವ್ ಹೇಳ್ತಿರೋದು?''

''ಅದೇ, ಬೆಂಗಳೂರು ನ್ಯಾಷನಲ್ ಕಾಲೇಜಲ್ಲಿ ಫಿಸಿಕ್ಸ್ ಲೆಕ್ಚರರ್ ಆಗಿ, ಆಮೇಲೆ ಇನ್ಸ್ಟಿಟ್ಯೂಟ್ ಆಫ್ ಮೆಂಟ್‌ಲ್ ಸೈನ್ಸಸ್ ನಲ್ಲಿ ರಿಸರ್ಚ್‌ಗೆ ಹೋದರಲ್ಲಾ, ಅವರೇ''

''ಸರಿ ಹೋಯ್ತು! ನನ್ನ ಸ್ನೇಹಿತ ಗುಂಡ S.S.L.C.ನೂ ಪಾಸಾಗಿಲ್ಲ.''

''ಓ! ಹಾಗಾದರೆ ನೀವು B.M.S. ಕಾಲೇಜು ಮ್ಯಾಥ್ಸ್ ಲೆಕ್ಚರರ್ ನಾರಾಯಣ್ ಅಲ್ವೇ?''

''ಅಲ್ಲ. ನಾನು·ನಾರಾಯಣ್ ಹೌದು. ಆದರೆ ನನ್ನ ಸರ್ವಿಸ್ ಎಲ್ಲಾ ಮೈಸೂರಲ್ಲೇ. ಶಾರದಾವಿಲಾಸ ಕಾಲೇಜಿನ ಮ್ಯಾಥ್ಸ್ ಲೆಕ್ಚರರ್ ಆಗಿ.''

''ಓ! ಸಾರಿಸಾರ್'' ಅಂದೆ.

''ಪರವಾಗಿಲ್ಲ ಬಿಡಿ. ಒಂದೊಂದು ಸಲ ಈ ವಯಸ್ಸಲ್ಲಿ ಹಾಗಾಗತ್ತೆ.''

ಪೆಚ್ಚುಮುಖ ಹಾಕಿಕೊಂಡು ಮುಂದೆ ಹೊರಟೆ. ನಾಲ್ಕು ಹೆಜ್ಜೆ ಹಾಕುವುದರೊಳಗೆ ನನ್ನ ಎದುರಿಗೆ ಬರುತ್ತಿದ್ದವರು ಹತ್ತಿರ ಬಂದು ನನ್ನ ಎರಡೂ ಭುಜಗಳ ಮೇಲೆ ಕೈಹಾಕಿ ಕುಲುಕಿ

''ಓಹೊಹೊ! ಏನಯ್ಯಾ ಅಂಬಿ? ಎಷ್ಟು ವರ್ಷ ಆಯ್ತು ನಿನ್ನನ್ನ ನೋಡಿ'' ಅಂದರು.

''ನೀವ್ಯಾರು ಗೊತ್ತಾಗಲಿಲ್ಲವಲ್ಲಾ'' ಅಂದೆ.

''ಏನಯ್ಯ. ಕ್ಲಾಸ್‌ಮೇಟ್ಸ್‌ನೇ ಮರೆತುಬಿಟ್ಯ? ಜ್ಞಾಪಿಸಿಕೊ. ನಂಜನಗೂಡು ಹೈಸ್ಕೂಲು... ಮಡಕೆಹೊಟ್ಟೆ ಸಂಸ್ಕೃತ ಪಂಡಿತರು .... ಜ್ಞಾಪಕ ಬಂತೇ?''

''ಹೂ. ಹೌದು, ನಾನೂ ಅಲ್ಲೇ ಓದಿದ್ದು'' ಅಂದೆ.

''ನಾನು ಈಕಡೇ ಬಂದೇ ಮೂವತ್ತು ವರ್ಷ ಆಗಿದೆ, ನಮ್ಮ ನಂಜನಗೂಡು ಕ್ಲಾಸ್‌ಮೇಟ್ಸ್ ಎಲ್ರನ್ನೂ ನೋಡ್ಬೇಕು ಅನ್ನಿಸುತ್ತೆ. ಅಂದಹಾಗೆ, ಬೀಕು ಎಲ್ಲಿದಾನೆ ಈಗ?''

''ಬೀಕು! ಅಂದ್ರೆ?''

''ಅದೇ ನಾಲೆ ಬೀದಿನಲ್ಲಿದ್ದನಲ್ಲ ಬಿ. ಕೃಷ್ಣಮೂರ್ತಿ ಅವನೇ.''

''ಅವರು ಎ.ಜಿ. ಆಫೀಸು ಸೇರಿದರು. ಆಫೀಸರಾಗಿ ರಿಟೈರಾಗಿ ಬೆಂಗಳೂರಲ್ಲೇ ಇರ್ಬೇಕು.''

''ಸರಿ, ಹ್ಯಾಪ ಎಲ್ಲಿದಾನೆ?''

"ಹ್ಯಾಪ! ಅಂದ್ರೆ?"

"ಏನು ನೀನು ಎಲ್ಲಾ ಕ್ಲಾಸ್‌ಮೇಟ್ಸನ್ನು ಮರೆತಿದ್ದೀ. ಅಡ್ವೊಕೇಟ್ ಪಾಂಡುರಂಗ ರಾಯರ ಮಗ ಹೆಚ್.ಸಿ. ಶ್ರೀಧರ. ಅವನ್ನೇ ಅಲ್ವೇ ನಾವು ಹ್ಯಾಪ ಅಂತ ಕರೀತಿದ್ದದ್ದು."

"ಓ! ಹೆಚ್.ಸಿ. ಶ್ರೀಧರ. ಗೊತ್ತಾಯ್ತು. ಅವರು ಹೋಗಿಬಿಟ್ಟರು. ಅವರು ನನ್ನ ಕ್ಲಾಸ್‌ಮೇಟ್ ಅಲ್ಲ, ನನಗಿಂತ ನಾಲ್ಕು ವರ್ಷ ದೊಡ್ಡೋರು."

"ಏನು? ಹಾಗಾದ್ರೆ ನೀವು ಅಂಬಿ ಅಲ್ವೇ?"

"ಅಲ್ಲ" ಅಂದೆ.

"ಸಾರಿ ಸರ್! ಥೇಟ್ ಅಂಬಿ ಹಾಗೆ ಇದೆ ನಿಮ್ಮ ಮುಖ. ಅದೇ ಗರುಡ ಮೂಗು, ಅದೇ ವಂಡರ್‌ಗಣ್ಣು. ಅದಕ್ಕೇ ಮಿಸ್ಟೇಕ್ ಮಾಡಿಕೊಂಡೆ ಕ್ಷಮಿಸಿ" ಅಂದರು.

"ಪರವಾಗಿಲ್ಲ ಬಿಡಿ. ಒಂದೊಂದು ಸಲ ಈ ವಯಸ್ಸಲ್ಲಿ ಹಾಗಾಗುತ್ತೆ" ಅಂದೆ.

ಈಚೀಚೆಗೆ ವಾಕಿಂಗ್ ಹೋಗುವುದಕ್ಕೆ ಸ್ವಲ್ಪ ಭಯ. ಅಂಬಿ ಕ್ಲಾಸ್‌ಮೇಟ್ಸ್ ಇನ್ಯಾರಾದರೂ ಸಿಕ್ಕಿಬಿಡುತ್ತಾರೋ ಅಂತ.



ದಂತಾವತಾರ

- ಧೃತಿ

ಬೋಡುಬಾಯ ತೆರೆದ ಶಿಶು
ಅಳುತಳುತಲೆ
ನಗುನಗುತಲೆ ಬೆಳೆಯುತ
ತೋರಿಸುವ
ಹಾಲು ಹಲ್ಲುಗಳು

ಬಲಿತ ಭಾವನೆಗಳ ಬೇರು
ತಳವೂರಿ
ಮುಗ್ಧತನವು ಅಲ್ಲಾಡಿ
ಹಿಂಜರಿದು ಬಿದ್ದರೂ
ಮತ್ತೆದ್ದು ಬರುವ ಕಸು
ಬಿಳುಪು ಹೊತ್ತು
ಮೊಳಕೆ ಬೆಳೆದು
ಸಾಲು ಹಿಡಿವ ಶಿಸ್ತು
ದೇಹ ಮನಸುಗಳ ತಾಳಕ್ಕೆ
ತಕ್ಕಂತೆ ಕುಣಿವ ತಾಕತ್ತು

ಪ್ರೀತಿ ಸಂತಸದಲ್ಲೊಮ್ಮೊಮ್ಮೆ ಮುಗುಳ್ನಕ್ಕಾಗ
ನಸುಬಿಂದ ತುಟಿಯಲ್ಲಿ
ಕಾಮದೇವನೆ ನೆಟ್ಟ
ದಾಲಿಂಬೆ ಬೀಜಗಳು
ಹಾಸ್ಯದ ಹೊನಲಿನಲಿ ನಗೆಯುಕ್ಕಿ ಬಂದಾಗ
ಕಿವಿಯಿಂದ ಕಿವಿವರೆಗೆ ವಿಕಸಿಸುವ
ಅಪರಂಜಿ ಮೊಗ್ಗುಗಳು

ಕೋಪ ಬಂದರೊ
ಕಟಕಟದ ರವರವ

ಜೊತೆಗೆ ಹೊಟ್ಟೆ (ಯುರಿ) ಯಲಿ ಪರಿವ
ಜಂತು ಹುಳುಗಳ ಕಾಟ
ಅಕಟಕಟಾ! ಅಟ್ಟಹಾಸದಲು
ಇದರ ಪ್ರತಾಪ
ರಕ್ಕಸರಂತೆ ವಕ್ರಿಸುವ
ಕೋರೆದಾಡೆಗಳು
ಸಾಲದು ಸಾಲದೆಂದು
ಹಲ್ಕಿರಿಯುತ್ತ ಬೇಡುವ
ದೀನತನ

ಆಶೆಬುರಕನಂತೆ
ಬಾಚಿ ಮೊಗೆದು ತುಂಬಿಕೊಡುವ
ಬಾಚಿ ಹಲ್ಲುಗಳು ಬೇರೆ
ದುಃಖ ದುಮ್ಮಾನಗಳ
ನೋವು ನಿರಾಶೆಗಳ
ಕೊರೆತದಲ್ಲಿ
ಹುಳುಕಾದರೂ ಜೀವನ (ದಂತ)
ಮುಚ್ಚದ ಬಾಯ ಮಂದಿ ಒಂದೆಡೆ

ಕೃತಕ ದಂತ ಪಂಕ್ತಿಯಲಿ
ನೈಜವನೆ ಮರೆಸುವ
ಹುಸಿ ನಗುವಿನ ಮಂದಿಯೊಂದೆಡೆ
ಕೊನೆಗೆ
ಮನದ ದೊಂಬರಾಟದ ಕುಣಿತದಲೆ
ಹೊತ್ತು ಕಳೆದು
ದಣಿದು, ಸೋತು, ಸೊರಗಿ
ಬೇರು ಕಳಚಿ ಬಿದ್ದು ಅಳಿದಾಗ
ಪಡೆವ ಸಮಚಿತ್ತ
ಬಿಚ್ಚುಬಾಯ ನಗೆಯಲ್ಲೆ
ದಂತಾವತಾರ ತೋರುತ್ತ

ಪುಸ್ತಕ ಪರಿಚಯ:

ಯೋಗಿ ಮತ್ತು ಅಪ್ಸರೆ

ಅಪರಂಜಿ ಶಿವುರವರ 'ಯೋಗಿ ಮತ್ತು ಅಪ್ಸರೆ' ಕೃತಿಯನ್ನು ಕೇವಲ ಇನ್ನೊಂದು 'ನಗೆ ಬರೆಹಗಳ' ಸಂಗ್ರಹವೆಂದು ವರ್ಗೀಕರಿಸಿಬಿಡುವದು ಅಷ್ಟೊಂದು ಸಮಂಜಸವಾಗಲಾರದು. ಹಾಗೆಂದು ಇನ್ನಾವುದೇ ವರ್ಗೀಕರಣಕ್ಕೂ ಈ ಕೃತಿ ಸುಲಭವಾಗಿ ಒಳಪಡುವಂತಹದಲ್ಲ.

ಇದರಲ್ಲಿ 'ಪ್ರೇತ ಡಾಟ್ ಕಾಮ್' 'ಆರ್ಕಿಟೆಕ್ಟ್ ಅಪ್ಪಣ್ಣ' 'ಒಂದು ದೆವ್ವದ ಕತೆ' ಯಂತಹ ಹೊಸ ಮಾದರಿಯ ನಗುಕತೆಗಳಿವೆ. 'ಬಾರ್ಬರಾ' 'ಕಡಲ ತೀರದ ಕಿನ್ನರ ಕೇರಿ' ಯಂತಹ ಸುಖವಾಹ ಅನುಭವ ಕಥನಗಳಿವೆ. 'ಪರಶಿವನ ಮುಡಿಯಲ್ಲಿ' 'ಲೀಲಾ' ಗಳಂತೆ ಎಲ್ಲಿಯೋ ಹುಟ್ಟಿ, ಒಳಗೆಲ್ಲೋ ಹರಿದು, ಇನ್ನೆಲ್ಲೋ ಸಂತಸದ ಬುಗ್ಗೆ ಚಿಮ್ಮಿಸುವ ಗಪ್ತಗಾಮನಿಗಳಿವೆ, 'ಮಂಗ್ ಮಧ್ಯೆ' 'ಸಾಕಾಣೆ' ಯಂತಹ ಬಾಲ್ಯಕಾಲದ (ಬಾಲಿಶವಲ್ಲದ) ನೆನಪುಗಳಿವೆ. 'ಮೆಟಾಟಾರ್ಸಲ್‌ರಾಜು' ನಂತಹ ಹೃದಯಂಗಮ ವ್ಯಕ್ತಿಚಿತ್ರಣವಿದೆ. 'ವೀಣಾವಾಣಿ' ಯಂತಹ ಹುಚ್ಚು ಮನಸ್ಸಿನ ಕಟ್ಟಳೆ ಮೀರಿದ ಪ್ರಣಯದ ಬೆಚ್ಚಗಿನ ಕನಸುಗಳಿವೆ.

ಅಲ್ಲದೇ 'ಪರಮೇಶಿ, ಕಲ್ಲೇಶಿ ಲಂಚ ಬಡಕ ರಾಜಕಾರಣಿ, ಮುಗ್ಧ ಹೆಂಡತಿ, ಲೋಫರ್ ಗಂಡ, ಗಯ್ಯಾಳಿ, ಗಮಾರ' ರಂತಹರನ್ನು ಬಿಟ್ಟಿರಲಾರದ ಸಾಂಪ್ರದಾಯಕ ನಗೆ ಓದುಗರನ್ನು ರಂಜಿಸಲು 'ದೇವೂ' 'ಪಾರ್ವತಜ್ಜಿ' 'ರಾಜೂ' 'ರೆಡ್ಡಿ' ಯತಂತಹ ಕೆಲವು ಪಾತ್ರಗಳನ್ನೂ ಲೇಖಕರು ಸೃಷ್ಟಿಸಿದ್ದಾರೆ.

ಇನ್ನು, ಬರೀ ನಗೆ ಚಟಾಕಿಗಳು (jokes) ಸಾಕೆನ್ನುವವರಿಗೆ ಅಲ್ಲಲ್ಲಿ ಕೆಲವು ಆಯ್ದ jokes ಗಳೂ ಇವೆ (ಮದುವೆ ಮಾಡ್ತಿರೇನು?)


ವಿಜ್ಞಾನದ ವಿದ್ಯಾರ್ಥಿಯಾಗಿ, ವೃತ್ತಿಯಿಂದ ಇಂಜಿನಿಯರಿಂಗ್ ಆಗಿ ಪ್ರವೃತ್ತಿಯಿಂದ ಹಾಸ್ಯ ಸಾಹಿತ್ಯದೆಡೆಗೆ ಒಲಿದ ಶಿವಕುಮಾರರ ಮನೋಭೂಮಿಕೆಯೇ ಶಿಸ್ತಿನದು, ಕಟ್ಟುನಿಟ್ಟಿನದು; ಇಂಗ್ಲೀಷಿನಲ್ಲಿ "No Nonsence' ಅನ್ನುತ್ತಾರಲ್ಲ ಹಾಗೆ.

ಅಂತೆಯೇ ಇರಬೇಕು. ಇವರ ಲೇಖನಗಳು ಚುರುಕಾಗಿವೆ ಕ್ರಿಸ್ಪಾ (crisp) ಗಿವೆ. ಲಘು ಬರಹಗಳಾದರೂ ತೂಕ ಕಳಕೊಂಡಿಲ್ಲ ಅಥವಾ ತೂಕದ ವಿಚಾರಗಳನ್ನೇ ಹಗುರಾಗಿ ಬಿಂಬಿಸಿದ್ದಾರೆ.

ಇಲ್ಲಿ ಪುಟ್ಟ ಕತೆಗಳಿವೆ, ಹರಟೆಗಳಿವೆ, ರಾಜಕೀಯ ಸಾಮಾಜಿಕ, ತಾತ್ವಿಕ ಚಿಂತನೆಗಳಿವೆ, ವ್ಯಕ್ತಿ ಚಿತ್ರಣಗಳಿವೆ, ಸಂಪಾದಕೀಯದಿಂದ ಆಯ್ದ ತುಣುಕುಗಳಿವೆ. ಈ ಎಲ್ಲ ವೈವಿಧ್ಯಮಯ ಕುಸುರೀ ಕೃತಿಗಳೂ, ತಿಳುವಾದ ನಾಗರೀಕವಾದ ಹಾಸ್ಯದ ಲೇಪದೊಂದಿಗೆ ರಂಜಿಸುತ್ತವೆ. ಬಿಂಬಿಸುತ್ತವೆ.

ಈ ಬರಹಗಳ 'ಪಂಚು' ಚುಚ್ಚುವದಿಲ್ಲ, ಕಚಗುಳಿಯಿಡುತ್ತವೆ. ಕಳೆದೆರಡು ದಶಕಗಳಿಂದ ಲೇಖಕ ಶಿವಕುಮಾರರು ಕನ್ನಡದ ಹಾಸ್ಯಕ್ಕೆ ತನ್ನದೇ ಆದ ಗೌರವಯುತ ಸ್ಥಾನವನ್ನು ದೊರಕಿಸಿಕೊಡಲು ಹೆಣಗುತ್ತಿದ್ದಾರೆ. ಅವರ ಈ ಕೃತಿ ''ಯೋಗಿ ಮತ್ತು ಅಪ್ಸರೆ'' ಆ ದಿಶೆಯಲ್ಲಿ ಇನ್ನೊಂದು ಹೆಜ್ಜೆಯಾಗಿದೆ.

– ಶ್ರೀನಿವಾಸ ವೈದ್ಯ



''ಬೋರ್ಡ್ ಇದೆ ಎಚ್ಚರಿಕೆ''
ಅಂತ ಬದಲಿಸಬಹುದಲ್ಲವೇ

ಆಧುನಿಕ ಪರಿಭಾಷೆಗಳು

– ವೈ ನಾರಾಯಣಶೆಟ್ಟಿ

1.	ಅರ್ಧಾಂಗಿ	:	ಗಂಡಸರ 'ಹಾಫ್‌ಶರ್ಟ್'
2.	ವಿಮರ್ಶೆ	:	ಸಾಹಿತ್ಯ ಕ್ಷೇತ್ರದಲ್ಲಿ ತನಗಾಗದವರ ಬರಹವನ್ನು ಹೀನಾಮಾನವಾಗಿ ತೆಗಳುವ 'ಗಂಭೀರ ಪ್ರಯತ್ನ'.
3.	ನಿರಾಭರಣ ಸುಂದರಿ	:	ದೊಡ್ಡ ಗಾತ್ರದ 'ಪ್ಲಾಸ್ಟಿಕ್ ಗೊಂಬೆ.'
4.	ಕಂತು-ಪಿತ	:	ಕಂತು-ಕಂತಿನಲ್ಲೇ ಮನೆಗೆ ಬೇಕಾದ ಸಾಮಾನು - ಸಲಕರಣೆಗಳನ್ನು ಖರೀದಿಸಿದ 'ಬಡಪ್ರಾಣಿ ಅಪ್ಪ'
5.	ದೂರ್ವಾಸ	:	ಪಯೋರಿಯಾ ರೋಗಕ್ಕೆ ತುತ್ತಾದ ರೋಗಿ
6.	ಇಂಟರ್‌ನೆಟ್	:	ಸೊಳ್ಳೇ ಕಾಟದಿಂದ ಪಾರಾಗಲು ಮಲಗುವುದಕ್ಕೆ ಮುಂಚೆ ಮನೆ ಒಳಗೆ ಕಟ್ಟಿಕೊಳ್ಳುವ 'ಸೊಳ್ಳೆ ಪರದೆ'.
7.	ಕನಸಿನ ಗೋಪುರ	:	ಮೊದ್ದು ಮಕ್ಕಳ ಬಗ್ಗೆ ಅಪ್ಪ - ಅಮ್ಮಂದಿರು ಕಾಣುವ ಕನಸು/ಭವಿಷ್ಯ
8.	ವೈರ್‌ಲೆಸ್ ಸುದ್ದಿ	:	ಹೆಂಗಸಿನ ಕಿವಿಯಲ್ಲಿ ಹೇಳಿದ 'ಗುಟ್ಟು'
9.	ಸತಿವ್ರತ	:	ಅಮ್ಮಾವರ ಗಂಡ ಎಂಬ ಬಿರುದಾಂಕಿತ 'ಹೆನ್ - ಪೆಕಡ್' ಗಂಡ.
10.	ಸುಂದರಾಂಗ	:	ಬಕ್ಕತಲೆ, ಬೊಚ್ಚುಬಾಯಿ, ಚುಕ್ಕೆಮುಖ, ಮೆಳ್ಳಗಣ್ಣು, ವಕ್ರನಾಸಿಕ, ತುಟಿ ಹರಕ, ಮೊರದ ಕಿವಿಗಳುಳ್ಳ 'ಅಮವಾಸ್ಯೆ' ಬಣ್ಣದ ವ್ಯಕ್ತಿ.
11.	ತಿಲೋತ್ತಮೆ	:	ಎಕ್ಸ್‌ಪೋರ್ಟ್ ಕ್ವಾಲಿಟಿ ಎಳ್ಳು.
12.	ವಾಚಸ್ಪತಿ	:	ಗಡಿಯಾರದ ಅಂಗಡಿ ಮಾಲಿಕ

13.	ಪ್ರತ್ಯುತ್ತರ	:	ಉತ್ತರದಿಕ್ಕಿಗೆ ಎದುರಾಗಿರುವ ದಕ್ಷಿಣ ದಿಕ್ಕು
14.	ಗುಬ್ಬಿ ಗೂಡು	:	ಬಡವರಿಗಾಗಿ ಘನ ಸರಕಾರ ಕಟ್ಟಿಸಿರುವ ಮನೆ
15.	ಪಂಚಾಮೃತ	:	ಪಂಚ್ ಮಾಡಿದ ನಂತರ ಹೊರಬರುವ ಡೈರಿಯ 'ಪ್ಯಾಕೆಟ್ ಮಿಲ್ಕ್'
16.	ಬಿಸಿಲ್ಗುದುರೆ	:	ರಾಜಕೀಯ ಪಕ್ಷಗಳು ತಯಾರಿಸುವ ಚುನಾವಣಾ ಪ್ರಣಾಳಿಕೆ
17.	ಜಲಕನ್ಯೆ	:	ಈಜುಗಾರಿಕೆ ಸ್ಪರ್ಧೆಯಲ್ಲಿ ಮೊದಲ ಸ್ಥಾನ ಪಡೆದ ಹುಡುಗಿ.
18.	ಮಿತ ಸಂತಾನ ಯೋಜನೆ	:	ಸಂತಾನಕ್ಕೂ ರೇಷನ್ ಪದ್ಧತಿ ಜಾರಿಗೆ ತಂದ ಸರಕಾರಿ ಯೋಜನೆ



"ನಾನು ಬರೀ ನಮಸ್ಕಾರ ಅಂದೆ.
ಅವಳೇ ಹಾಯ್ ಅಂದದ್ದು"

ಹಾಸ್ಯೋತ್ಸವ -'99

– ಟಿ. ಸುನೀತ

ಒಂದು ಪ್ರತಿಕ್ರಿಯೆ - ನಗುವಿನ ಹಲವು ಬಗೆ

25-12-99 ರಂದು ಅದ್ಭುತ ಯಶಸ್ವಿಯಾಗಿ ನಡೆದ ಬೀchi ಸಂಸ್ಮರಣೆಯಲ್ಲಿ ಅಪಾರ ಸಂಖ್ಯೆಯಲ್ಲಿ ಬಂದ ಸಭಿಕರು ನಗುತ್ತಿದ್ದ ಕೆಲವು ವೈಖರಿಗಳನ್ನು ದಾಖಲಿಸಲು ಇಚ್ಛಿಸುತ್ತೇನೆ.

1. ಪಕ್ಕದಲ್ಲಿ ಕುಳಿತಿದ್ದ ಒಬ್ಬ ವ್ಯಕ್ತಿ ತಮ್ಮ ಕನ್ನಡಕವನ್ನು ಪದೇ ಪದೇ ತೆಗೆಯುತ್ತಾ ಕಣ್ಣು ಒರೆಸಿಕೊಳ್ಳುತ್ತಿದ್ದರು. ಇದನ್ನು ನೋಡಲಾಗದೆ ಪಕ್ಕದಲ್ಲಿದ್ದವರು ''ಸಾರ್ ನೀವು ಕನ್ನಡಕವನ್ನು ನನ್ನ ಕೈಯಲ್ಲಿ ಕೊಟ್ಟುಬಿಡಿ ಸಮಾರಂಭ ಮುಗಿದ ಮೇಲೆ ಕೊಡುತ್ತೇನೆ'' ಎಂದರಂತೆ.
2. ನಗುವ ಪ್ರಕ್ರಿಯೆಯಲ್ಲಿ ಸತತ ತೊಡಗಿದ್ದ ಒಬ್ಬರು ಪಕ್ಕದಲ್ಲಿದ್ದವರಿಗೆ ಆಗಾಗ್ಗೆ ಹೊಡೆದು ಹೊಡೆದು ನೋವನ್ನುಂಟು ಮಾಡಿದರಂತೆ. ಹಾಸ್ಯೋತ್ಸವದಲ್ಲಿ ಯಾರಿಗೂ ನೋವನ್ನುಂಟು ಮಾಡದ ಹಾಸ್ಯ ಎಂದು ಪ್ರಚಾರ ಮಾಡಿದ್ದು ಎಷ್ಟು ಸರಿ?
3. ಕೆಲವು ಉತ್ಸಾಹಿಗಳು ಕೇಳಿದ್ದನ್ನು ಬರೆದುಕೊಳ್ಳುತ್ತಿದ್ದರು. ನಕ್ಕರೆ ಬರವಣಿಗೆಗೆ ತೊಂದರೆ ಅಕ್ಕಪಕ್ಕದವರನ್ನು ಕೇಳಿದರೆ ಅವರಿಗೆ ತೊಂದರೆ ಹೀಗೆ ಮುಕ್ತ ನಗೆ ಸಾಧ್ಯವಾಗಲಿಲ್ಲವಂತೆ ಕೆಲವರಿಗೆ ನಗುವಿನ ಬಿರುಸಿನಲ್ಲಿ ಕೆಲವರ ಪೆನ್ನು ಕೆಳಗೆ ಬಿದ್ದು ಅದನ್ನು ತೆಗೆದುಕೊಳ್ಳಲು ಯಾರ ಯಾರ ಕಾಲಿಗೋ ನಮಸ್ಕಾರದ ಅನಿವಾರ್ಯವಂತೆ.
3. ಕೆಲವು ಕ್ಷಣದಲ್ಲಿ ಕೆಲವರು ತಮ್ಮ ತಲೆಯನ್ನು ಒತ್ತಿಕೊಂಡು ನಗುತ್ತಿದ್ದರು. ಎದ್ದುಹೋದ ತಮ್ಮ ಕಡೆಯವರಿಗೆ ಜಾಗ ಇಟ್ಟುಕೊಂಡು ಹಲವರು ನಕ್ಕರೆ, ಇನ್ನು ಕೆಲವರು ತಮ್ಮ ಹೊಟ್ಟೆಯನ್ನು ಹಿಡಿದುಕೊಂಡು ನಗುತ್ತಿದ್ದರು.
4. ಗುರುತು ಕಂಡವರು ಸಿಕ್ಕಾಗ ನಗುವುದು ವಾಡಿಕೆ ಆದರೆ ಹಾಸ್ಯೋತ್ಸವದಲ್ಲಿ ಹಾಗೆ ಮುಕ್ತವಾಗಿ ನಕ್ಕರೆ ಪಕ್ಕದಲ್ಲಿ ಹಿಡಿದುಕೊಂಡ ಸೀಟು ಕೇಳಿದರೆ? ಎಂಬ ಭಯದಿಂದ ಒಂದು ಹೊಸ ತರಹ ಅಸಾಹಯಕ ನಗು!

ಮತ್ತೆರಡು ಸ್ವಾರಸ್ಯ ಘಟನೆ

1. ಜಾಹಿರಾತಾಗಲಿ ಎಂದ ಪ್ರಾಯೋಜಕರು ತಮ್ಮ ಬ್ಯಾನರ್ ಹಾಕಿದ್ದರೆ ಕಿಟಕಿಯ ಮೂಲಕ ನೋಡಲು ಆ ಬ್ಯಾನರ್‌ಗಳನ್ನು ಸುರುಳಿ ಸುರುಳಿ ಮಾಡಿ ಒಬ್ಬ ಅದನ್ನು ಕಟ್ಟಿಯೇಬಿಟ್ಟ.
2. ಹೆಚ್ಚಿನ ಕುರ್ಚಿಗಳು ಲಾರಿಯಲ್ಲಿ ಬಂದಾಗ ಜನರು ಎರಡೇ ನಿಮಿಷದಲ್ಲಿ ಇಳಿಸಿಕೊಂಡುಬಿಟ್ಟರು ವ್ಯವಸ್ಥಾಪಕರು unloading charges ನ್ನು ಕಳೆದುಕೊಡಬಹುದು ಎಂದು ಒಬ್ಬರು ಹೇಳುತ್ತಿದ್ದರು.



ಅಜ್ಜಿಯ ಔಷಧ

– ಎಸ್.ಎನ್. ಶಿವಸ್ವಾಮಿ

ಹಲ್ಲುನೋವು ಹನ್ನೆರಡನೇ ವಯಸ್ಸಿಗೇ ನನ್ನ "ಪಾಲಿಗೆ ಬಂದ ಪಂಚಾಮೃತ" ಅದರಲ್ಲೂ ನನ್ನ ಹಲ್ಲುನೋವು ವರ್ಷಕ್ಕೆರಡಾವರ್ತಿಯಂತೆ ತಪ್ಪದೆ ಕಳೆದ ಹದಿನೈದು ವರ್ಷಗಳಿಂದ ಬರುತ್ತಲೇ ಇದೆ. ಆದರೆ ಒಂದು ಸಲವೂ ಕೆಲವರಿಗೆ ಬರುವ ಹಾಗೆ ತಡೆಯಲಾಗದ ಹಾಗೆ ಬಿದ್ದು ಒದ್ದಾಡುವ ಪ್ರಸಂಗ ಬಂದಿರಲಿಲ್ಲ. ನನಗೆ ತ್ರಾಸ ಕೊಡುತ್ತ ಇದ್ದದ್ದು (ಇರುವುದು ಅನ್ನಿ) ಒಂದೇ ಒಂದು ದವಡೇ ಹಲ್ಲು (ಎಡಗಡೆಯದು, ಕೆಳಗಿನ ದವಡೆ). "ಹೋಗಿ ಆ ಹಾಳಾದ್ದನ್ನ ಕೀಳಿಸಿಕೊಂಡಾದರೂ ಬಾರೋ" ಎಂಬ ನನ್ನ ತಂದೆಯ ಬುದ್ಧಿವಾದವನ್ನ ಕಾರ್ಯರೂಪಕ್ಕೆ ತರುವ ಧೈರ್ಯ ನನಗೆಲ್ಲಿ? ಆಸ್ಪತ್ರೆಯ ಇಕ್ಕಳದ ಹೆಸರು ಕೇಳಿದರೇ ನನ್ನ ಹಲ್ಲು 'ಜುಂ' ಅನ್ನುತ್ತಿತ್ತು.

ನಾನು ಹೆದರುತ್ತಾ ಇದ್ದ ಪ್ರಸಂಗ ಕಡೆಗೆ ಮೊನ್ನೆ ಬಂದೇ ಬಂತು. ಕಳೆದ ಏಕಾದಶೀ ದಿನ, ನಮ್ಮ ಮನೆಯಲ್ಲಿ ಯಥಾಪ್ರಕಾರ ಉಪವಾಸ ನಾನೂ ನಾಲ್ಕೈದು ಇಡ್ಲಿ, ಎರಡು ದೋಸೆ, ಒಂದಿಷ್ಟು ಉಪ್ಪಿಟ್ಟು, ಸಜ್ಜಿಗೆ, ನಂಜಿಕೊಳ್ಳೋದಕ್ಕೆ ಬೋಂಡ, ಪಕೋಡ, ಕಡಲೇ ಬೇಳೆ ಕೋಸಂಬರಿ ಇತ್ಯಾದಿಗಳನ್ನು ಬಲಗಡೆ ದವಡೇಲೇ ಅಗಿದು ಮುಗಿಸಿದೆ. ಮುಗಿಸಿ, ರಾಮಾ ಕೃಷ್ಣ ಅನ್ನುತ್ತ ಪಾನಕ ಗೀನಕ ಕುಡಿದು ಮಲಗಿದ್ದರೆ ಯಾವ ತೊಂದರೆಯೂ ಇರುತ್ತಿರಲಿಲ್ಲ. ಆದರೆ ಹಾಳಾದ್ದು ಚಪಲ, ವಿಷಮಗಳಿಗೇಲಿ ಚಕ್ಕುಲಿ ಗೂಡೇಗೆ ಕೈ ಹಾಕಿದೆ. ಏಳೆಂಟು ಚಕ್ಕುಲೀನೂ ತೀರಿಸಿದೆ.

ಕಾದಿತ್ತು, ಬೆಳಗಾಗುತ್ತಲೂ ನನ್ನ ಹಲ್ಲು ಜಪ ಮಾಡುವುದಕ್ಕೆ, ಪ್ರಾರಂಭದಲ್ಲಿ ಸಣ್ಣ ಸುತ್ತಿಗೆಯಿಂದ ದವಡೇಯ ಆ ಭಾಗದಲ್ಲಿ ಮೆಲ್ಲಗೆ ಕುಟ್ಟುತ್ತಿರುವಂತೆ ಇತ್ತು. ಮುಖ ತೊಳೆದು ಕಾಫಿ ಕುಡಿಯುವ ವೇಳೆಗೆ ಸುತ್ತಿಗೆ ಸ್ವಲ್ಪ ದೊಡ್ಡ ಸೈಜಿಗೆ ಬದಲಾಗಿದ್ದಲ್ಲದೆ, ಹೊಡೆತವೂ ಸ್ವಲ್ಪ ಜೋರಾಗಿತ್ತು. ಕ್ರಮೇಣ ಸುತ್ತಿಗೆಗೆ ಸಹಾಯವಾಗಿ ಅದರ ಜತೆಗೊಂದು ಸ್ಕ್ರೂಡ್ರೈವರ್ ಸಹ ಕೆಲಸಕ್ಕೆ ಪ್ರಾರಂಭಮಾಡಿತು, ಹೊರಗಡೆಯಿಂದ, ನಿಧಾನವಾಗಿ ಹಲ್ಲಿನ ಬುಡವನ್ನು

ಕೊರೆಯುತ್ತ, ಕೊರೆದ ಜಾಗದಲ್ಲಿ ಸ್ವಲ್ಪ ಸ್ವಲ್ಪವಾಗಿ ಕಾದ ಕಬ್ಬಿಣವನ್ನು ಹುಯ್ಯುವಂತಾಯ್ತು.

ಎಲ್ಲಾ ಸಹಿಸಿದೆ. ಆದರೆ ಯಾವಾಗ ದವಡೆಯಷ್ಟನ್ನೂ ಬೀಸುವ ಕಲ್ಲಿನಸಲ್ಲಿಟ್ಟು ಬೀಸುವ ಪ್ರಯತ್ನ ಆರಂಭವಾಯ್ತೋ, ಅದೇ ತಡ; ಅರ್ಧಗಂಟೆಯಿಂದ ನಮ್ಮಜ್ಜಿ ತನ್ನ ದಂತವೈದ್ಯ ಪ್ರಾವೀಣ್ಯತೆಯನ್ನುಪಯೋಗಿಸಿ ನಡೆಸುತ್ತಿದ್ದ ಹನ್ನೊಂದನೇ ಪ್ರಯೋಗವನ್ನು ನಿಲ್ಲಿಸ ಹೇಳಿದೆ. ಇನ್ನೂ ಆಗತಾನೇ ಅಜ್ಜಿ ಓಮ, ಶುಂಠಿ, ಉತ್ತುತ್ತಿಕಾಯಿ ಬೀಜ, ಕರಿಬೇವಿನಸೊಪ್ಪು, ಬಿಲ್ಪತ್ರೆ, ನವಿಲುಗರಿ, ಬೆಣಚುಕಲ್ಲು, ಲವಂಗ, ದಂತ, ಗ್ರಾಮಾಫೋನ್ ಪ್ಲೇಟಿನ ಚೂರು, ಏಲಕ್ಕಿಸಿಪ್ಪೆ ಇತ್ಯಾದಿಗಳನ್ನೆಲ್ಲ ತಕ್ಕ ಪ್ರಮಾಣದಲ್ಲಿ ಒಟ್ಟುಗೂಡಿಸಿ ಜೇನುತುಪ್ಪದಲ್ಲಿ ಅರೆಯುತ್ತಾ ಇದ್ದರು, ನನ್ನ ಹಲ್ಲಿಗಾಗಿ. ಇನ್ನದಕ್ಕಿಂತ ಶ್ರೇಷ್ಠವಾದ ಔಷಧಿ ಎಲ್ಲೂ ಇರಲಾರದು ಅಂತ ಅವರ ನಂಬಿಕೆ.

ಆಯುರ್ವೇದ, ಯುನಾನಿ ಔಷಧಿಗಳನ್ನು ಇದಕ್ಕೆ ಮುಂಚೆ ಎಷ್ಟೋ ಬಾರಿ ಉಪಯೋಗಿಸಿ ನಿಷ್ಫಲವಾಗಿತ್ತು. ಇನ್ನು ಬೇರೆ ಯಾವ ಉಪಾಯವೂ ಇಲ್ಲವೆಂದು ತೋರಿದ ಕ್ಷಣ, ಹಲ್ಲು ವೈದ್ಯರು ಯಾರನ್ನಾದರೂ ಮರೆ ಹೋಗುವ ಯೋಚನೆ ಮಾಡಿದೆ; ಯಾರ ಹೆಸರೂ ತಟ್ಟನೆ ನೆನಪಿಗೆ ಬರಲಿಲ್ಲ. ದವಡೆಯನ್ನದುಮಿಕೊಂಡೇ ಪಕ್ಕದ ರಸ್ತೆಯಲ್ಲಿದ್ದ ಸೊಸೈಟಿಯ ಟೆಲಿಫೋನಿಗೆ ಓಡಿದೆ. ಡೈರೆಕ್ಟರಿಯಲ್ಲಿ ಡೆನ್‌ಟಿಸ್ಟುಗಳ ಹೆಸರುಗಳನ್ನೆಲ್ಲ ನೋಡಿದೆ. ''ಅಚುನ್ ಚುಂಗ್'', ''ಚಾಂಗ್‌ಯೆನ್'', ''ಮಿಂಗ್ ಉಚಿನ್'' ಅನ್ನುವ ಚೀನೀ ವೈದ್ಯರನ್ನುಳಿದು ಇನ್ನು ನಾಲ್ಕೈದು ಹೆಸರುಗಳಿದ್ದವು. ಅವರಲ್ಲಿ ಡಾಕ್ಟರ್ ಮೃತ್ಯುಂಜಯರ್ ಅವರ ಹಸ್ತಗುಣ ಅಪಾರವಾದದ್ದೆಂಬುದು ತಟ್ಟನೆ ನೆನಪಿಗೆ ಬಂತು. ಅವರು ಲಕ್ಷಾಧಿಕಾರಿಗಳ ಹಲ್ಲುಗಳನ್ನೆಲ್ಲಾ ಗುಣಪಡಿಸಿ ತಾವು ಕೋಟ್ಯಾಧಿಕಾರಿಯಾಗಿರುವುದು ಎಲ್ಲರಿಗೂ ತಿಳಿದ ವಿಷಯ. ಸರಿ, ತಿರುಗಿಸಿದೆ ಚಕ್ರ, ದವಡೆಯನ್ನ ಒಂದು ಕೈಲಿ ಅದುಮಿಕೊಂಡೇ. ''ಹಲೋ, ಹಲೋ, ಹಲ್ಲೋ...!''

''ಹೌದು, ಹಲ್ಲಿನ ಆಸ್ಪತ್ರೇನೆ.''

''ನಮಸ್ಕಾರ. ಒಂದು ಹಲ್ಲು ವಿಪರೀತ ಇದಾಗಿದೆ...''

''ತಡೀರಿ - ತಮ್ಮ ಹೆಸರೇನು...''

''ಶಿವಸ್ವಾಮಿ... Yes... ಹೌದು... ಇನಿಷಿಯಲ್ಲೇ? ಎಸ್.ಎನ್. ಎಸ್ for ಸಂಕಟ. ಎನ್ for ನೋವು.''

''ಸರಿ. ಈಗ ಗಂಟೆ ಹತ್ತು. ಇಲ್ಲಿ 12-15ರ ವರೆಗೆ ಎಂಗೇಜ್‌ಮೆಂಟ್ಸ್ ಇವೆ. ನೀವು ಸರಿಯಾಗಿ 12-20ಕ್ಕೆ ಬನ್ನಿ. ಕನ್ಸಲ್ಟಿಂಗ್ ಛಾರ್ಜು 50 ರೂಪಾಯಿ ತನ್ನಿ. ನಮಸ್ಕಾರ.''

ಅಯ್ಯೋ! ಇನ್ನೂ ಎರಡು ಗಂಟೆ ಕಾಲ! ಬೀಸುವ ಕಲ್ಲು ಹೋಗಿ ದವಡೆಯ ಮೇಲೆ ರೋಡ್ ಇಂಜಿನ್ ಓಡಾಡಲಾರಂಭಿಸಿತ್ತು. ಅಜ್ಜಿ ತಂದ ಬಿಸಿ ಬಿಸಿ ಗಂಜಿ ಹೇಗೋ ಕುಡಿದು ಹೊಟ್ಟೆ ತುಂಬಿಸಿಕೊಂಡೆ. ಅಲ್ಲಿಂದ ಒಂದರ್ಧಗಂಟೆಯ ಕಾಲ ನೋವಿನ ಮುಸುಕಿನಲ್ಲೇ ಒಂದು ವಿಧವಾದ ನಿದ್ದೆ ಬಂದಹಾಗೆ ಬಂದು, ಹಾಗೇ ಬಿದ್ದುಕೊಂಡಿದ್ದೆ. ಹಾಗೂ ಹೀಗೂ ಹನ್ನೆರಡೆವರೆಗೆ ಕಾಲ ಕಳೆದೆ. ನನಗೆ ತಿಳಿಯದ ಹಾಗೆ ನನ್ನ ದವಡೆಗೆ ಅಜ್ಜಿಯ ಹನ್ನೊಂದನೆಯ ಔಷಧ ಬಳಿಯಲಾಗಿತ್ತು. ಗಾಡಿ ಬಂದು ನಿಂತ ಶಬ್ದ ಕೇಳಿ ಮೆಲ್ಲಗೆ ಎದ್ದು, ಕೋಟು ಹಾಕಿಕೊಂಡು ಹೊರಟೆ. ಅಜ್ಜಿ ಒಂದು ಲೋಟ ಮಜ್ಜಿಗೆ ಕುಡಿಸಿ, ''ನೀನು ಅಲ್ಲಿಗೆ ಹೋಗಿ ಸೇರೋದರೊಳಗೆ ನನ್ನ ಔಷಧಿ ಕೆಲಸ ಮಾಡಿರದಿದ್ದರೆ ನನ್ನ ಮೂಗು ಮೂರು ತುಂಡು ಮಾಡಿಕೋತೇನೆ'' ಅಂದು ಹೆದರಿಸಿದರು.

ಅಜ್ಜಿ ಮೂಗು ತುಂಡಾಗಬೇಕಾದ ಪ್ರಮೇಯ ಒದಗಲಿಲ್ಲ. ಗಾಡಿ ಸ್ವಲ್ಪ ದೂರ ಹೋಗುವುದರಲ್ಲಿ ನನ್ನ ನೋವು ಸ್ವಲ್ಪಸ್ವಲ್ಪವಾಗಿ ಇಳಿಯಲಾರಂಭಿಸಿತು. ಡಾ॥ ಮೃತ್ಯುಂಜಯನ್‌ರ ಆಸ್ಪತ್ರೆ ಹತ್ತಿರವಾಗುತ್ತಿದ್ದಂತೆ ನೋವೆಲ್ಲ ಮಂತ್ರಹಾಕಿದಂತೆ ಮಾಯವಾಗಿ ಹಲ್ಲು ಇನ್ನೊಂದು ಏಕಾದಶಿ ಉಪವಾಸಕ್ಕೆ ಸಿದ್ಧವಾಗಿತ್ತು. ಮೊದಲು ನಾನು ನಂಬಲಿಲ್ಲ. ಆ ಹಲ್ಲನ್ನ ಕುಟ್ಟಿ ಕುಟ್ಟಿ ನೋಡಿಕೊಂಡೆ. ಹಲ್ಲು ನೋವಿನ ನೆನಪು ಕೂಡ ಉಳಿದಿರಲಿಲ್ಲ. ಡಾಕ್ಟರ ದುರದೃಷ್ಟ ಅಂದುಕೊಂಡೆ.

ಸರಿಯಾಗಿ 12-20ಕ್ಕೆ ಡಾಕ್ಟರೆದುರು ಹೋಗಿ ನಿಂತೆ. ಅವರು ''ರೂಪಾಯಿ ಆ ಗುಮಾಸ್ತರ ಹತ್ತಿರ ಕಟ್ಟಿ ರಸೀತಿ ತಗೊಳ್ಳೀ. ಯಾವ ಹಲ್ಲು ಅಂದ್ರಿ?'' ಅಂದರು.

ನಾನು ಕೈಕೈ ಹಿಡುಕಿಕೊಂಡು, ''ಕ್ಷಮಿಸಿ, ಈಗ... ನನ್ನ ಹಲ್ಲಿಗೆ ಯಾವ ಕೇಡೂ ಇಲ್ಲ... ವೃಥಾ ತಮಗೆ.... ತೊಂದರೆ...'' ಅಂದೆ.

''ಏನೂ ಪರವಾಯಿಲ್ಲ, ಕೌಂಟರ್‌ನಲ್ಲಿ ರೂಪಾಯಿ ಕಟ್ಟಿಬಿಟ್ಟು ಬನ್ನಿ ನೋಡೋಣ'' ಅಂದರು ಡಾಕ್ಟರು.

''ಕ್ಷಮಿಸಿ ನಾ ಹೇಳಿದ್ದು ತಮಗೆ ಅರ್ಥವಾಗಲಿಲ್ಲ ಅಂತ...'' ಅಂದೆ.

''ಎಲ್ಲ ಅರ್ಥವಾಯ್ತು. ನಿಮಗೆ ಸದ್ಯಕ್ಕೆ ನನ್ನ ಟ್ರೀಟ್‌ಮೆಂಟ್ ಅವಶ್ಯಕವಿಲ್ಲ. ಬಾಧಕವಿಲ್ಲ. ಎಂಗೇಜ್‌ಮೆಂಟ್ ಗೊತ್ತುಮಾಡಿ ಬಿಟ್ಟಿರೋದರಿಂದ ರೂಪಾಯಿ

ಮಾತ್ರ... ದಯವಿಟ್ಟು... ಕಟ್ಟಬಿಟ್ಟು... ಯಾಕಂದರೆ ಇಂಥಾ ದೊಡ್ಡ ಎಸ್ಟಾಬ್ಲಿಷ್‌ಮೆಂಟುಗಳಲ್ಲಿ...'' ಅಂದರು ಡಾಕ್ಟರು.

''ಸ್ವಲ್ಪ ನ್ಯಾಯ ಗೀಯ'' ಅಂದೆ.

''ಯಾರನ್ನ ಬೇಕಾದರೂ ವಿಚಾರಿಸಿ. ಇಲ್ಲೆಲ್ಲಾ ಫಾರಿನ್ ಪದ್ಧತಿ. ಬೇಕಾದರೆ ಪಕ್ಕದಲ್ಲೇ ನಮ್ಮ ಲಾಯರಿದ್ದಾರೆ, ಅವರನ್ನೇ ಕನ್ಸಲ್ಟ್‌ಮಾಡಿ. ಈಗ ಸದ್ಯಕ್ಕೆ ಮುಂದಿನ ಕೇಸು ಕಾದಿದೆ. ತಾವು ದಯಮಾಡಿ ಹಣ ಪಾವತಿಮಾಡಿ ಹೊರಟರೆ... ಬಾಯ್! ನೆಕ್ಸ್ಟ್ ಕೇಸ್!'' ಅಂದರು ಡಾಕ್ಟರು ದಾಕ್ಷಿಣ್ಯವಿಲ್ಲದೆ.

ಅವರ ಹತ್ತಿರ ಇನ್ನಷ್ಟು ವಾದಿಸಿ ಒಂದೆರಡು ಗಂಟೆಯಷ್ಟು ಗಡುವು ತೆಗೆದುಕೊಂಡು ಹತ್ತಿರವೇ ಇದ್ದ ನಮ್ಮ ಲಾಯರ ಬಳಿ ಹೋದೆ. ಅವರ ಬುದ್ಧಿವಾದವೇನೂ ಉತ್ತೇಜಕವಾಗಿರಲಿಲ್ಲ. ಇನ್ನೂ ಸ್ವಲ್ಪ ದೊಡ್ಡ ಲಾಯರಾಗಿದ್ದ ಗೋಪಾಲ ಕೃಷ್ಣಯ್ಯಂಗಾರ‍್ಯರ ಹತ್ತಿರ ಹೋದೆ. ಡಾಕ್ಟರ ಕಾಲಹರಣ ಮಾಡಿದ ತಪ್ಪಿಗೆ ಅವರಿಗೆ ಹಣ ತೆರಲೇಬೇಕೆಂದು ಅವರು ವಾದಿಸಿ, ಉದಾಹರಣೆಗಾಗಿ, ತಮ್ಮ ಕಾಲ ಹರಣದ ಸಲುವಾಗಿ ನನ್ನಿಂದ ಹದಿನೈದು ರೂಪಾಯಿ ವಸೂಲು ಮಾಡಿದರು. ಲಾ ತಿಳಿದ ನನ್ನ ಸ್ನೇಹಿತನೊಬ್ಬನನ್ನ ವಿಚಾರಿಸಿದೆ. ಅವನೂ ಅದೇ ವಾದ ಹೂಡಿ ನನ್ನಿಂದ ಹೋಟಲಿಗೆ ಎರಡೂವರೆ ರೂಪಾಯಿ ಖರ್ಚುಮಾಡಿಸಿದ.

ಡಾಕ್ಟರನ್ನ ನಾನು ತಿರುಗಿ ಕಂಡಾಗ ಅವರ ಕೇಸುಗಳೆಲ್ಲ ಮುಗಿದಿದ್ದವು. ಸಾಧ್ಯವಾದಷ್ಟು ಗಿಟ್ಟಲಿ ಅಂದುಕೊಂಡು 20 ರೂಪಾಯಾದರೂ ತಗ್ಗಿಸುವಂತೆ ಕೇಳಿಕೊಂಡೆ. ಸಾಧ್ಯವಿಲ್ಲವೆಂದರು. ''ನಿಮಗೆ ಸಂಸಾರ, ಮಕ್ಕಳು ಮರಿ ಇಲ್ಲವೆ? ದಯದಾಕ್ಷಿಣ್ಯ ಇಲ್ಲವೆ'' ಅಂದೆ. ಮರುಗಲಿಲ್ಲ. ಕಡೆಗೆ ''ನೀವೇನು ಮನುಷ್ಯನೋ ಮೃಗವೋ'' ಅನ್ನುವಷ್ಟು ಹೋಗಿ, 50 ರೂಪಾಯಿ ಅವರ ಮುಖದ ಮೇಲೆ ಎಸೆದು, ''ಇನ್ನು ನನ್ನ ದವಡೆಯ 32 ಹಲ್ಲುಗಳೂ ಹಾಳಾದರೂ ನಿಮ್ಮಂಥವರ ಮೆಟ್ಟಲು ಮೆಟ್ಟುವುದಿಲ್ಲ'' ಅಂದು ಅವರನ್ನ ಮನಸಾರೆ ಬಯ್ದು ಹೊರಗೆ ಕಾಲು ಹಾಕಿದೆ.

ಮಟಮಟ ಮಧ್ಯಾಹ್ನ ಮೂರು ಗಂಟೆ. ಜೋಲುಮುಖ ಹಾಕಿಕೊಂಡು ಬಸ್ಸಿನಿಂದಿಳಿದು ಮನೆಯ ಬಾಗಿಲು ಮುಟ್ಟುವ ವೇಳೆಗೆ ಅಜ್ಜಿಯ ಔಷಧದ ಪ್ರಭಾವ ಇಳಿದು, ನನ್ನ ಹಾಳು ಹಲ್ಲು ಯಥಾ ಸಾವಕಾಶವಾಗಿ ತಾಳಹಾಕಲಾರಂಭಿಸಿತ್ತು. ಅದೇ ಸುತ್ತಿಗೆ, ಸ್ಕ್ರೂಡ್ರೈವರ್, ಬೀಸುವಕಲ್ಲು, ಇ. ಇ.!

Reg No BGW 180



ಪ್ರತಿಯೊಂದು ಎಚ್‌ಎಮ್‌ಟಿ ಟೆನ್‌ಮ್ಯಾಕ್ಸ್ ಅಂತರರಾಷ್ಟ್ರೀಯ ಕ್ವಾರ್ಟ್ಸ್ ಗಡಿಯಾರವೂ ವಿಶ್ವವಿಖ್ಯಾತ ಶೈಲಿ, ಗುಣಮಟ್ಟ ಹಾಗೂ ತಂತ್ರಜ್ಞಾನಗಳ ಅಪರಿಮಿತ ಸಂಯೋಜನೆಯ ಚಿಹ್ನೆಯಾಗಿದೆ. 200ಕ್ಕೂ ಹೆಚ್ಚು ಮಾಡೆಲ್‌ಗಳಲ್ಲಿ, ಕೇವಲ ರೂ. 350/-ಕ್ಕೂ ಮೇಲ್ಪಟ್ಟ ಬೆಲೆಗಳಲ್ಲಿ, ಇದು ನಿಮ್ಮ ಫ್ಯಾಷನ್ ಗಡಿಯಾರವಾಗಿ ಅತ್ಯುತ್ತಮ, ಅತ್ಯುತ್ಕೃಷ್ಟ ಆಯ್ಕೆ

ಅಂತರರಾಷ್ಟ್ರೀಯ ಕ್ವಾರ್ಟ್ಸ್ ಗಡಿಯಾರಗಳು

ಎಲ್ಲಾ ಎಚ್‌ಎಮ್‌ಟಿ ಕಂಪನಿ, ಎಕ್ಸ್‌ಕ್ಲೂಸಿವ್ ಹಾಗೂ ಟೈಂ ಆರ್ಟ್ ಷೋರೂಮ್‌ಗಳಲ್ಲಿ ಹಾಗೂ ಅಂಗೀಕೃತ ಮಾರಾಟ ಮಳಿಗೆಗಳಲ್ಲಿ ಲಭ್ಯ

MASS/HMT/1770-99

Printed by V.R. NATH for the Publisher KORAVANJI APARANJI TRUST. Published by KORAVANJI APARANJI TURST, 36, 6th Main Road, Malleswaram, Bangalore - 560 003
PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010